ಸಂಪುಟ : 8 ಸಂಚಿಕೆ : 206 ಪುಟ : 4 ಬೆಲೆ : 3.00 ಗುರುವಾರ ಸಪ್ಟೆಂಬರ್ 21, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 206 Pages : 4 Price : 3.00 Thursday September 21, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದ ವಿವಿಧ ಭಾಗಗಳಿಗೆ ಸೆಪ್ಟೆಂಬರ್ 21ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು. **ಸ್ಥಳಗಳ ವಿವರ:** ವಾರ್ಡ್ ನಂ. 29ರಲ್ಲಿ ಗುಂಪಿನ ಲೈನ್, ಭಾಂಡಗೆ ಲೈನ್, ಡಂಬಳ ಲೈನ್, ವಾರ್ಡ್ ನಂ. 01ರಲ್ಲಿ ಎಸ್.ಎಮ್. ಕೃಷ್ಣನಗರ ಮೇಲಿನ ಭಾಗ, ಕೆಳಗಿನ ಭಾಗ, ವಾರ್ಡ್ ನಂ. 27ರಲ್ಲಿ ವಿಜಯನಗರ ಸ್ಕೂಲ್, ಕರುಗಲ್ ಲೈನ್, ವಾಲ್ಮೀಕಿ ಭವನ, ಶಿಗ್ಗಾಂವಿ ಲೇಔಟ್, ಕಮತರ ಪ್ಲಾಟ್, ಟವರ್ ಕಂಬ,

ವಾರ್ಡ್ ನಂ. 35ರಲ್ಲಿ ಸಿದ್ದು ಪಾಟೀಲ ಲೈನ್, ಗಂಗಾವತಿಯವರ ಲೈನ್, 1ನೇ ಕ್ರಾಸ್ ಲೈನ್, ಶಿವಾನಂದ ಗಾರ್ಡನ್ ಸಚ್ಚಿದಾನಂದಮಠ, ವಾರ್ಡ್ ನಂ. 28ರಲ್ಲಿ ಅಪಾರ್ಟ್ಮೆಂಟ್, ಎಚ್, ಎಚ್, ಪಾಟೀಲ ಲೈನ್, ಕಾಗದಗಾರ ಓಣಿ, ಕೊರ್ಲಹಳ್ಳಿ ಮಾಸ್ತರ್ ಲೈನ್, ಅಬ್ಬಿಗೇರಿ ಲೈನ್, ಗವಾಯಿಗಳ ಆಶ್ರಮ ಲೈನ್, ಕೃಷ್ಣ ಟಿ ವರ್ಷ ಲೈನ್, ಸೊಲ್ಲಾಪಟ್ಟಿಯವರ ಲೈನ್, ವಾರ್ಡ್ ನಂ 21, 22, 20ರಲ್ಲಿ ಕಗ್ಗನಹಳ್ಳಿ, ಹಾರೋಗೇರಿ ಭಾಗ-1, ಭಾಗ-2 ಹೊನ್ನೆತ್ತಮ್ಮ ಲೈನ್, ಭಾಗ-1, ಭಾಗ-2, ಹೆಬಸೂರ ಲೈನ್, ಸೋಮನಗೌಡ್ರ ಲೈನ್, ದ್ಯಾಮಪ್ಪನಕಟ್ಟಿ, ಗಂಜಿಬಸವೇಶ್ವರ ಸರ್ಕಲ್ ಖಾನತೋಟ ಭಾಗ-1, ಭಾಗ-2, ಎಸ್.ಟಿ.ಯವರ ಲೈನ್, ವಾರ್ಡ್ ನಂ. 30ರಲ್ಲಿ ಪುಟ್ಟರಾಜ ನಗರ ರೋಣದ ಲೈನ್, ಪಾರ್ಶಿಯವರ ಲೈನ್, ವಾರ್ಡ್ ನಂ. 5, 6ರಲ್ಲಿ ಹನಮಂತನಗುಡಿ ಲೈನ್, ರೇಣುಕಾಚಾರ್ಯ ಕಲ್ಯಾಣ ಮಠ ಲೈನ್, ಬಾಳಿಕಾಯಿ ಲೈನ್, ಹೊನ್ನಪ್ಪನವರ ಲೈನ್, ಪಾಟೀಲರ ಲೈನ್, ಶಿವಾಜಿ ನಗರ 4 ಭಾಗಗಳು, ಪಂಚಲಕ್ಷ್ಮಿ ಬಡಾವಣೆ

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶ್ರೀ ಮಹಾತಪಸ್ವಿ ಸೇವಾ ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ಶ್ರೀ ಅವಧೂತ ಕವಿಗುರುರಾಜ ಗುರೂಜಿ

## ವೃದ್ಧಾಶ್ರಮದ ಅನಾಗರಿಕ ಸಂಸ್ಕೃತಿ ಮಾಯವಾಗಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾಗಿದ್ದು, ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ತಂದೆ-ತಾಯಿಯರನ್ನು ಪೂಜನೀಯ ಮತ್ತು ಗೌರವ ಭಾವನೆಯಿಂದ ಕಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ ಎಂದು ಶ್ರೀ ಮಹಾತಪಸ್ವಿ ಸೇವಾ ಪ್ರತಿಷ್ಠಾನದ ಸಂಸ್ಥಾಪಕರಾದ ಶ್ರೀ ಅವಧೂತ ಕವಿಗುರುರಾಜ ಗುರೂಜಿ ಹೇಳಿದರು.

ಅವರು ಬುಧವಾರ ಪಟ್ಟಣದ ಜಿ.ಎಫ್ ಉಪನಾಳ ಟ್ರಸ್ಟ್ ಶಾಂತಿಧಾಮ ವೃದ್ಧಾಶ್ರಮದಲ್ಲಿ ಗೌರಿ-ಗಣೇಶ ಹಬ್ಬದ ಪ್ರಯುಕ್ತ ಹರಿಹರದ ಶ್ರೀ ಮಹಾತಪಸ್ವಿ ಸೇವಾ ಪ್ರತಿಷ್ಠಾನದಿಂದ ಹಮ್ಮಿಕೊಳ್ಳಲಾಗಿದ್ದ 'ಗಡಿ ಕಾಯುವ ಗರ್ಭಗುಡಿಗೆ ನಮನ' ಅಭಿಯಾನ ಹಾಗೂ ವಿದ್ಯಾರ್ಥಿಗಳಿಗೆ ಉಚಿತ ಲೇಖನ ಸಾಮಗ್ರಿ ವಿತರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.



> ಕಳೆದ 7 ವರ್ಷಗಳಿಂದ ಪ್ರತಿಷ್ಠಾನ ಅನೇಕ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಪ್ರದಾಯಿಕ ಕಾರ್ಯಕ್ರಮಗಳ ಮೂಲಕ ನೊಂದ ಎಲ್ಲರ ಜೀವ ನನ್ನದೆಂಬ ಭಾವನೆಯೊಂದಿಗೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದೆ. ಈ ನಿಟ್ಟಿನಲ್ಲಿ ದೇಶದ ಜನರ ಶಾಂತಿ, ನೆಮ್ಮದಿ, ಸುರಕ್ಷಿತ ಬದುಕಿಗಾಗಿ ತಮ್ಮ ಮಕ್ಕಳನ್ನೇ(ಸೈನಿಕರು) ಪಣಕ್ಕಿಟ್ಟ ತಾಯಂದಿರ ತ್ಯಾಗ, ದೇಶಪ್ರೇಮಕ್ಕೆ ಸಲಾಮ್ ಹೇಳುವ 'ಗಡಿ ಕಾಯುವ ಗರ್ಭಗುಡಿಗೆ ನಮನ' ಅಭಿಯಾನ ಮತ್ತು ಮಕ್ಕಳಿಗೆ ಜ್ಞಾನ ಮತ್ತು ಸಂಸ್ಕಾರ ಧಾರಣೆ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
>
> **- ಶ್ರೀ ಅವಧೂತ ಕವಿಗುರುರಾಜ ಗುರೂಜಿ.**
> ಶ್ರೀ ಮಹಾತಪಸ್ವಿ ಸೇವಾ ಪ್ರತಿಷ್ಠಾನದ ಸಂಸ್ಥಾಪಕರು.

ವಿದ್ಯಾವಂತ ಮಕ್ಕಳೇ ಇಂದು ತಂದೆ-ತಾಯಿಯರನ್ನು ವೃದ್ಧಾಶ್ರಮಕ್ಕೆ ದೂಡುತ್ತಿರುವುದು ದುರ್ದೈವದ ಸಂಗತಿ. ಧರ್ಮದ ಫಲ ಶ್ರೇಷ್ಠವಾಗಿದ್ದರೆ, ಕರ್ಮದ ಫಲ ನಿಕೃಷ್ಟವಾಗಿರುತ್ತದೆ. ಎಲ್ಲರೂ ದಾನ, ಧರ್ಮ, ನ್ಯಾಯ ನೀತಿಯ ಮಾರ್ಗದಲ್ಲಿ ಬದುಕಬೇಕು. ವೃದ್ಧಾಶ್ರಮದ ಈ ಅನಾಗರಿಕ ಸಂಸ್ಕೃತಿ ಮಾಯವಾಗಬೇಕು. ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣು ಎಂಬಂತೆ ತಾಯಂದಿರು ಮಕ್ಕಳಿಗೆ ಬಾಲ್ಯದಲ್ಲಿಯೇ ಉತ್ತಮ ಸಂಸ್ಕಾರ, ಮಾನವೀಯ ಮೌಲ್ಯ, ಪ್ರೀತಿ, ನಂಬಿಕೆ, ವಿಶ್ವಾಸ, ಕೌಟುಂಬಿಕ ಸಂಬಂಧಗಳ ಬಗ್ಗೆ ತಿಳಿಸಬೇಕು ಎಂದರು.

ಶಾಸಕ ಡಾ. ಚಂದ್ರು ಲಮಾಣಿ ಮಾತನಾಡಿ, ಮನೆಯೇ ಮೊದಲ ಪಾಠಶಾಲೆ-ತಾಯಿಯೇ ಮೊದಲ ಗುರು ಎಂಬಂತೆ ತಾಯಂದಿರು ಮಕ್ಕಳಿಗೆ ಬಾಲ್ಯದಲ್ಲಿ ಶಿಕ್ಷಣ ಜತೆಗೆ ಉತ್ತಮ ಸಂಸ್ಕಾರ, ಮೌಲ್ಯಗಳನ್ನು ಕಲಿಸಬೇಕು. ಅಂಕ ಗಳಿಕೆಗೆ ಮಾತ್ರ ಒತ್ತು ಕೊಡಬಾರದು. ಪ್ರತಿಷ್ಠಾನದ ಸಮಾಜಮುಖಿ ಕಾರ್ಯ ಅತ್ಯಂತ ಶ್ಲಾಘನೀಯವಾಗಿದ್ದು, ಅವರ ಸೇವಾ ಕಾರ್ಯಕ್ಕೆ ತಮ್ಮ ಸಹಕಾರ ಇರುತ್ತದೆ ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ಅಂಗವಿಕಲರ ಕಲ್ಯಾಣಾಧಿಕಾರಿ ಮಹಾಂತೇಶ ಕುರಿ, ಪ್ರತಿಷ್ಠಾನದ ರಾಜ್ಯಾಧ್ಯಕ್ಷೆ ಕೆ.ಸಿ ಶಾಂತಕುಮಾರಿ, ತಹಸೀಲ್ದಾರ ಕೆ.ಆನಂದ ಶೀಲ, ಪುರಸಭೆ ಸದಸ್ಯರಾದ ಪ್ರವೀಣ ಬಾಳಿಕಾಯಿ, ಎಸ್.ಕೆ ಹವಾಲ್ದಾರ, ಪುಲಕೇಶ ಉಪನಾಳ ಮಾತನಾಡಿದರು. ಜಿ.ಎಫ್ ಉಪನಾಳ ಪ್ರತಿಷ್ಠಾನದ ಅಧ್ಯಕ್ಷ ಪ್ರಕಾಶ ಉಪನಾಳ, ಶೇಖರಗೌಡ ಆವೋಜಿ, ಅನಿಲಕುಮಾರ ಶೆಲ್ಲಿಕೇರಿ, ತಿರಕನಗೌಡ ಬಮ್ಮನಗೌಡ್ರ, ಜಯಕುಮಾರ ಸಾಂಬ್ರಾಣಿ, ರವೀಂದ್ರ ಕಪಲಿ, ಕಿರಣಕುಮಾರ ಅಂಗಡಿ, ನೀಲಮ್ಮ ದಾಸಪ್ಪನವರ, ಎಸ್.ಜೆ ಹೂವಿನ ಸೇರಿ ಹಲವರಿದ್ದರು. ರತ್ನಾ ಕುಂಬಾರ, ವಿರೇಶ ಹಿರೇಮಠ ನಿರೂಪಿಸಿದರು.

### ವಾ.ಕ.ರ.ಸಾ.ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಭರತ್ ಎಸ್. ಮಾಹಿತಿ

## ಸಂಸ್ಥಾಪನಾ ರಜತ ಮಹೋತ್ಸವ ಸಮಾರಂಭ ಸೆ.24ಕ್ಕೆ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಂಸ್ಥಾಪನಾ ರಜತ ಮಹೋತ್ಸವ ಸಮಾರಂಭವನ್ನು ಸೆ.24ರಂದು ಧಾರವಾಡದ ಡಾ. ಡಿ. ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಭರತ್ ಎಸ್ ತಿಳಿಸಿದ್ದಾರೆ.



ಆಗಿನ ಮುಂಬೈ ಕರ್ನಾಟಕ ಅಂದರೆ, ಇಂದಿನ ಕಿತ್ತೂರು ಕರ್ನಾಟಕ ಭಾಗದ ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಸಕಾಲಿಕ ಸಾರಿಗೆ ವ್ಯವಸ್ಥೆಯನ್ನು ಮಿತವ್ಯಯಕರ ದರದಲ್ಲಿ ಕಲ್ಪಿಸುವ ಧ್ಯೇಯೋದ್ದೇಶದಿಂದ ವಾಯವ್ಯ ಕರ್ನಾಟಕ ರಸ್ತೆಯು ಮೂಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೇರ್ಪಟ್ಟು 1997ರ ನವೆಂಬರ್ 1ರಂದು ಸ್ವತಂತ್ರ ಸಾರಿಗೆ ಸಂಸ್ಥೆಯಾಗಿ ಅಸ್ತಿತ್ವಕ್ಕೆ ಬಂದಿದೆ. ಪ್ರಸ್ತುತ ಧಾರವಾಡ, ಬೆಳಗಾವಿ, ಬಾಗಲಕೋಟೆ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಕಲ್ಪಿಸುವಲ್ಲಿ ನಿರತವಾಗಿದೆ. ಆರಂಭದಲ್ಲಿ 3099 ಬಸ್ಸುಗಳಿಂದ ನಿತ್ಯ 10.08 ಲಕ್ಷ ಕಿ.ಮೀ ಕಾರ್ಯಾಚರಣೆ ಮಾಡಲಾಗುತ್ತಿತ್ತು. 13.50 ಲಕ್ಷ ಜನರು ಸಂಚಾರ ಮಾಡುತ್ತಿದ್ದರು. ಪ್ರಸ್ತುತ 4830 ಬಸ್ಸುಗಳಿಂದ ನಿತ್ಯ 15.09 ಲಕ್ಷ ಕಿ.ಮೀ ಕಾರ್ಯಾಚರಣೆ ಮಾಡಲಾಗುತ್ತಿದೆ. 24-26ಲಕ್ಷ ಜನರು ಪ್ರಯಾಣ ಮಾಡುತ್ತಿದ್ದಾರೆ.

ಸಂಸ್ಥೆಗೆ 25 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಸಂಸ್ಥಾಪನಾ ರಜತ ಮಹೋತ್ಸವ ಸಮಾರಂಭವನ್ನು ಸೆ.24ರಂದು ಧಾರವಾಡದ ಸತ್ತೂರಿನಲ್ಲಿರುವ ಡಾ. ಡಿ ವೀರೇಂದ್ರ ಹೆಗ್ಗಡೆ ಕಲಾ ಕ್ಷೇತ್ರದಲ್ಲಿ ಸಂಜೆ 4 ಗಂಟೆಗೆ ಆಯೋಜಿಸಲಾಗಿದೆ.

> ಸಮಾರಂಭದಲ್ಲಿ 50 ಹೊಸ ಬಸ್ಸುಗಳು ಹಾಗೂ ಪುನಶ್ಚೇತನಗೊಳಿಸಿದ ಬಸ್ಸುಗಳಿಗೆ ಚಾಲನೆ, ಇ-ಉಗ್ರಾಣ ತಂತ್ರಾಂಶ ಹಾಗೂ ರಜತ ಮಹೋತ್ಸವದ ಸ್ಮರಣ ಸಂಚಿಕೆ ಬಿಡುಗಡೆ, ಅಪಘಾತ ರಹಿತ ಚಾಲಕರಿಗೆ ಬೆಳ್ಳಿ ಪದಕ ಪ್ರದಾನ ಮತ್ತು ಅಪಘಾತ ವಿಮಾ ಪರಿಹಾರ ವಿತರಣೆ, ಹುಬ್ಬಳ್ಳಿ-ಧಾರವಾಡ ನಗರ ಸಾರಿಗೆಗ ಬಸ್ಸುಳಲ್ಲಿ ನಗದು ರಹಿತ ವ್ಯವಹಾರಕ್ಕಾಗಿ ಈ-ಪರ್ಸ್ ಸ್ಮಾರ್ಟ್ ಕಾರ್ಡ್‌ಗೆ ಚಾಲನೆ ಹಾಗೂ ನೌಕರರ ಅಂತರ್ ವಿಭಾಗೀಯ ಪಂದ್ಯಾವಳಿಗಳಲ್ಲಿ ವಿಜೇತ ತಂಡಗಳಿಗೆ ಪಾರಿತೋಷಕ ವಿತರಣೆ ಮತ್ತಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸಾರಿಗೆ ಮತ್ತು ಮುಜರಾಯಿ ಸಚಿವರು ಹಾಗೂ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಅಧ್ಯಕ್ಷರಾದ ರಾಮಲಿಂಗಾರೆಡ್ಡಿಯವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕೇಂದ್ರ ಸಂಸದೀಯ ವ್ಯವಹಾರಗಳ ಕಲ್ಲಿದ್ದಲು ಮತ್ತು ಗಣಿ ಸಚಿವರಾದ ಪ್ರಹ್ಲಾದ ಜೋಶಿ, ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ, ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಎಸ್.ಲಾಡ್, ಸರ್ಕಾರದ ಮುಖ್ಯ ಸಚೇತಕರಾದ ಸಲೀಂ ಅಹಮದ್ ಅವರು ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಹುಬ್ಬಳ್ಳಿ ಧಾರವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರದ ಶಾಸಕರಾದ ಅರವಿಂದ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿರುವ ವಾ.ಕ.ರ.ಸಾ.ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಭರತ್ ಎಸ್., ಎಲ್ಲ ಸಾರ್ವಜನಿಕರು ಹಾಗೂ ಮಾಧ್ಯಮ ಮಿತ್ರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದ್ದಾರೆ.

## ಕ್ರೀಡಾ ಸ್ಫೂರ್ತಿಯೊಂದಿಗೆ ಪಾಲ್ಗೊಳ್ಳಿ: ಉಷಾ ದಾಸರ



■ವಿಜಯಸಾಕ್ಷಿ ಸುದ್ದಿ, ಗದಗ

ಕ್ರೀಡೆಯಲ್ಲಿನ ಸೋಲನ್ನೇ ಗೆಲುವಿನ ಮೆಟ್ಟಿಲುಗಳನ್ನಾಗಿಸಿಕೊಂಡು ಕ್ರೀಡಾ ಸ್ಫೂರ್ತಿಯೊಂದಿಗೆ ಕ್ರೀಡೆಗಳಲ್ಲಿ ಭಾಗವಹಿಸುವಂತೆ ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ ತಿಳಿಸಿದರು.

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಹಯೋಗದಲ್ಲಿ ನಗರದ ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಬುಧವಾರದಂದು 2023-24ನೇ ಸಾಲಿನ ಗದಗ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕ್ರೀಡೆ ಎಂಬುದು ಬರೀ ಕ್ರೀಡಾಕೂಟಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಯುವಜನತೆ ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಹೊಂದಬೇಕು. ಜಿಲ್ಲೆಯಲ್ಲಿ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸಿದಂತಹ ಕ್ರೀಡಾಪಟುಗಳಿದ್ದು, ಅವರಂತೆಯೇ ಜಿಲ್ಲೆಯ ಕ್ರೀಡಾಪಟುಗಳು ದಸರಾ ಕ್ರೀಡಾಕೂಟದಲ್ಲಿ ಸಹ ಕೀರ್ತಿ ಪತಾಕೆ ಹಾರಿಸುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ಕ್ರೀಡಾ ಧ್ವಜಾರೋಹಣವನ್ನು ನೆರವೇರಿಸಿದರು. ತಾಲ್ಲೂಕಾ ಕ್ರೀಡಾಧಿಕಾರಿ ಎಂ.ಎಸ್ ಕುಚಬಾಳ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.

ಸಮಾರಂಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಶರಣು ಗೋಗೇರಿ, ನಿವೃತ್ತ ಯೋಗ ಶಿಕ್ಷಕ ಕೆ.ಎಸ್ ಪಲ್ಲೇದ, ಜಿಲ್ಲೆಯ ಏಳು ತಾಲೂಕುಗಳ ಕ್ರೀಡಾಪಟುಗಳು ಹಾಗೂ ದೈಹಿಕ ಶಿಕ್ಷಕರು, ಪೊಲೀಸ್ ಸಿಬ್ಬಂದಿಗಳು ಭಾಗಿಯಾಗಿದ್ದರು. ನಾಡಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಗೀತಾಂಜಲಿ ಗೌಡರ ಕಾರ್ಯಕ್ರಮ ನಿರೂಪಿಸಿದರು. ಮಹೇಶ ತಳಳ್ಳಿ ವಂದಿಸಿದರು.

## ಕಾವೇರಿ ಬಿಕ್ಕಟ್ಟು: ಸಚಿವರು, ಮುಖಂಡರೊಂದಿಗೆ ಸಭೆ



■ವಿಜಯಸಾಕ್ಷಿ ಸುದ್ದಿ, ನವದೆಹಲಿ

ಕಾವೇರಿ ನೀರು ಸಂಕಷ್ಟದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ದೆಹಲಿಯ ತಾಜ್ ಹೋಟೆಲ್‌ನಲ್ಲಿ ಬುಧವಾರ ಕರ್ನಾಟಕದ ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿದರು.

ರಾಜ್ಯದಲ್ಲಿ ಕುಡಿಯುವ ನೀರು ಮತ್ತು ರೈತರಿಗೆ ನೀರಿನ ಅಭಾವ ಇರುವ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣೆ ಪ್ರಾಧಿಕಾರವು (CWMA) ಅದೇಶಿರುವುದರಿಂದ ಉಂಟಾಗಿರುವ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಪ್ರಹ್ಲಾದ ಜೋಷಿ, ಶೋಭಾ ಕರಂದ್ಲಾಜೆ, ರಾಜೀವ್ ಚಂದ್ರಶೇಖರ್, ಡಿ.ವಿ ಸದಾನಂದಗೌಡ, ನಳಿನ್ ಕುಮಾರ್ ಕಟೀಲ್, ಶ್ರೀ ವೀರೇಂದ್ರ ಹೆಗ್ಗಡೆ, ಡಿ.ಕೆ ಸುರೇಶ್, ಪ್ರತಾಪ್ ಸಿಂಹ, ಪ್ರಜ್ವಲ್ ರೇವಣ್ಣ, ಸುಮಲತಾ ಅಂಬರೀಶ್, ತೇಜಸ್ವಿ ಸೂರ್ಯ, ಜಿ.ಸಿ ಚಂದ್ರಶೇಖರ್, ರಾಜ್ಯದ ಸಚಿವರಾದ ಚಲುವರಾಯಸ್ವಾಮಿ, ಎಚ್.ಕೆ ಪಾಟೀಲ್, ಎಚ್.ಸಿ ಮಹದೇವಪ್ಪ, ದೆಹಲಿಯಲ್ಲಿ ಕರ್ನಾಟಕ ಸರಕಾರದ ಪ್ರತಿನಿಧಿ ಟಿ.ಬಿ ಜಯಚಂದ್ರ ಸೇರಿದಂತೆ ಸಂಸದರು, ರಾಜ್ಯಸಭೆ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

### ಪತ್ರಿಕಾಗೋಷ್ಠಿಯಲ್ಲಿ ಕೆಪಿಪಿಸಿ ಪದವೀಧರ ಘಟಕದ ರಾಜ್ಯಾಧ್ಯಕ್ಷ ಆರ್.ಎಂ. ಕುಬೇರಪ್ಪ ಹೇಳಿಕೆ

## ಹಾವೇರಿ-ಗದಗ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ

■ವಿಜಯಸಾಕ್ಷಿ ಸುದ್ದಿ, ಗದಗ

ಕಾಂಗ್ರೆಸ್ ಪಕ್ಷದ ಸಂಘಟನೆಗಾಗಿ ನಾಲ್ಕು ದಶಕಗಳಿಂದ ರಾಜ್ಯದಲ್ಲಿ ಕೆಲಸ ಮಾಡಿದ್ದೇನೆ. ಹಾವೇರಿ-ಗದಗ ಲೋಕಸಭೆ ಕ್ಷೇತ್ರದ ಸಂಪರ್ಕ ಹೊಂದಿರುವ ಕಾರಣಕ್ಕೆ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಟಿಕೆಟ್ ಬಯಸಿದ್ದೇನೆ ಎಂದು ಕೆಪಿಪಿಸಿ ಪದವೀಧರ ಘಟಕದ ರಾಜ್ಯಾಧ್ಯಕ್ಷ ಆರ್.ಎಂ. ಕುಬೇರಪ್ಪ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುದೀರ್ಘ ರಾಜಕೀಯ ಜೀವನದಲ್ಲಿ ಮೂರು ಬಾರಿ ಶಿಕ್ಷಕರ ಕ್ಷೇತ್ರದಿಂದ ಹಾಗೂ ಒಂದು ಬಾರಿ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದೆನೆ. ರಾಜ್ಯಮಟ್ಟದ ನಾಯಕರು ನನ್ನ ಪರವಾಗಿದ್ದಾರೆ. ಕ್ಷೇತ್ರದಾದ್ಯಂತ ನನ್ನದೇಆದ ಕಾರ್ಯಕರ್ತರ ಪಡೆ ಇರುವುದರಿಂದ ಚುನಾವಣೆಗೆ ಸ್ಪರ್ಧಿಸುವ ಇಚ್ಛೆ ಹೊಂದಿದ್ದೇನೆ ಎಂದರು. ಹಾವೇರಿ-ಗದಗ ಲೋಕಸಭಾ ಕ್ಷೇತ್ರದ ಪ್ರಬಲ ಆಕಾಂಕ್ಷಿ ಎಂದು ಪಕ್ಷದ ವರಿಷ್ಠರಿಗೆ ಈಗಾಗಲೇ ಮನವಿ ಮಾಡಿಕೊಂಡಿದ್ದೇನೆ. ಆದರೂ ಪಕ್ಷ ಸಮೀಕ್ಷೆ ನಡೆಸಿ ಸಮರ್ಥ ಅಭ್ಯರ್ಥಿಯನ್ನು ಆಯ್ಕೆ ಮಾಡಲಿ. ಪಕ್ಷ ಟಿಕೆಟ್ ಕೊಡದಿದ್ದರೂ ನಾನು ಪಕ್ಷದ ಶಿಸ್ತಿನ ಸಿಪಾಯಿಯಾಗಿ ಕೆಲಸ ಮಾಡುತ್ತೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ಕೆ.ಸಿ. ನಾಗರಾಜ, ರೈತ ನಾಯಕ ಗೋಪಾಲರೆಡ್ಡಿ, ಎಸ್.ಎಚ್. ಹುಚಗೊಂಡರ, ಹನುಮಂತಗೌಡ ಕಲ್ಮನಿ, ಉಳುವೇಶ ಮದ್ನೂರ ಇತರರು ಉಪಸ್ಥಿತರಿದ್ದರು.




## ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಮೆಟ್ರಿಕ್ ಪೂರ್ವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ವೇತನ ತಂತ್ರಾಂಶ ssp.karnataka.gov.in ನಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗಿನ ಹೊಸ ವಿದ್ಯಾರ್ಥಿಗಳ ಆನ್‌ಲೈನ್ ಅರ್ಜಿ ಸಲ್ಲಿಸುವಿಕೆ ಹಾಗೂ ಈಗಾಗಲೇ ಹಿಂದಿನ ತರಗತಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ 2023-24ನೇ ಸಾಲಿಗೆ ನವೀಕರಣ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ( ಗ್ರೇಡ್-1 ) ಸಮಾಜ ಕಲ್ಯಾಣ ಇಲಾಖೆ, ಎಸ್.ಪಿ.ಆಫೀಸ್ ಎದುರುಗಡೆ, ಹೊಸ ಬಸ್ ನಿಲ್ದಾಣದ ಹಿಂಭಾಗ, ಗದಗ ದೂರವಾಣಿ ಸಂಖ್ಯೆ 08372-297258 ನ್ನು ಸಂಪರ್ಕಿಸಬಹುದಾಗಿದೆ.

### ವಿವಿಧ ಗ್ರಾಮಗಳಲ್ಲಿ ಕೃತಜ್ಞತಾ ಸಭೆಯಲ್ಲಿ ಪಾಲ್ಗೊಂಡ ಶಾಸಕ ಜಿ.ಎಸ್ ಪಾಟೀಲ

## ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧ



■ವಿಜಯಸಾಕ್ಷಿ ಸುದ್ದಿ, ರೋಣ

ಈಗಾಗಲೇ ಕಾಂಗ್ರೆಸ್ ಸರಕಾರ ಕೊಟ್ಟ ಮಾತಿನಂತೆ ಗ್ಯಾರಂಟಿಗಳನ್ನು ಕಾರ್ಯ ರೂಪಕ್ಕೆ ತಂದಿದ್ದು, ನೀವಿಟ್ಟ ಭರವಸೆಗಳನ್ನು ನಾನು ಸಹ ಹುಸಿಗೊಳಿಸದೆ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಶಾಸಕ ಜಿ.ಎಸ್ ಪಾಟೀಲ ಹೇಳಿದರು.

ಅವರು ಬುಧವಾರ ಸರ್ಜಾಪೂರ, ಶಾಂತಗೇರಿ, ಜಿಗೇರಿ ಗ್ರಾಮಗಳಲ್ಲಿ ಜರುಗಿದ ಕೃತಜ್ಞತಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

> ರೋಣ ಮತಕ್ಷೇತ್ರದ ಮತದಾರರು 25 ಸಾವಿರಕ್ಕೂ ಅಧಿಕ ಮತಗಳಿಂದ ನನ್ನನ್ನು ಗೆಲ್ಲಿಸಿ ಆಶೀರ್ವದಿಸಿದ್ದಾರೆ. ಅವರಿಗೆ ಕೃತಜ್ಞತೆಯನ್ನು ಸಲ್ಲಿಸುವುದು ನನ್ನ ಮೊದಲ ಕರ್ತವ್ಯವಾಗಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಸರಕಾರದ ಯೋಜನೆಗಳನ್ನು ತಲುಪಿಸುವ ಜೊತೆಗೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ.
>
> **- ಜಿ.ಎಸ್ ಪಾಟೀಲ.**
> ಶಾಸಕರು, ರೋಣ.

ಕ್ಷೇತ್ರದ ಮತದಾರರು ನನ್ನ ಮೇಲೆ ಅಪಾರ ನಂಬಿಕೆಯನ್ನಿಟ್ಟು ಗೆಲ್ಲಿಸಿದ್ದಾರೆ. ಅವರ ಇಚ್ಛೆಯಂತೆ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಹೊಸ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು, ಗ್ರಾಮೀಣ ಭಾಗಗಳಲ್ಲಿ ಶಿಕ್ಷಣ, ಆರೋಗ್ಯ, ಉತ್ತಮ ರಸ್ತೆ ಸಂಪರ್ಕಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು ಎಂದರು.

ನಾಡಿನ ಮತದಾರರ ಆಶೀರ್ವಾದದಿಂದ ಕಾಂಗ್ರೆಸ್ ಪಕ್ಷ 136 ಸ್ಥಾನಗಳನ್ನು ಗೆದ್ದು ಸುಭದ್ರ ಸರಕಾರ ನಡೆಸುತ್ತಿದ್ದು, ನಾಡಿನ ಸರ್ವ ಜನಾಂಗದ ಹಿತವನ್ನು ಬಯಸಿ ಉತ್ತಮ ಕಾರ್ಯವನ್ನು ನಿರ್ವಹಿಸುತ್ತಿದೆ. ಚುನಾವಣೆಗೂ ಮೊದಲು ಘೋಷಣೆ ಮಾಡಿದಂತೆ ಐದು ಗ್ಯಾರಂಟಿಗಳಲ್ಲಿ ನಾಲ್ಕನ್ನು ಈಗಾಗಲೇ ಈಡೇರಿಸಿದ್ದು, ಶೀಘ್ರವೇ 5ನೇ ಗ್ಯಾರಂಟಿಯನ್ನು ಅನುಷ್ಠಾನಗೊಳಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲಾಗುತ್ತದೆ ಎಂದರು. ವೀರಣ್ಣ ಶೆಟ್ಟರ, ಯೂಸುಪ್ ಇಟಗಿ, ಜಿ.ಪಂ ಮಾಜಿ ಉಪಾಧ್ಯಕ್ಷೆ ಮಂಜುಳಾ ಹುಲ್ಲಣ್ಣವರ, ಮೋಹನ್ ಹುಲ್ಲಣ್ಣವರ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಗಾಂಜಾ ಬೆಳೆದ ಆರೋಪಿಗೆ 3ವರ್ಷ ಶಿಕ್ಷೆ, 25 ಸಾವಿರ ದಂಡ



■ ವಿಜಯಸಾಕ್ಷಿ ಸುದ್ದಿ, ಗದಗ

ತನ್ನ ಸ್ವಂತ ಲಾಭಕ್ಕೋಸ್ಕರ ಜಮೀನಿನಲ್ಲಿ ಗಾಂಜಾ ಬೆಳೆದಿದ್ದ ಆರೋಪಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಗದಗ ತಾಲೂಕಿನ ಬೆಳಹೋಡದಿಂದ ಮದಗಾನೂರು ಗ್ರಾಮಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿ ಸರ್ವೆ ನಂ. 111/1+2ಅ/2 ರಲ್ಲಿ ಒಟ್ಟು 10 ಹಸಿ ಗಾಂಜಾ ಗಿಡಗಳನ್ನು ಬೆಳೆಸಲಾಗಿತ್ತು.

22.10.2021 ರಂದು ಆರೋಪಿತ ಅಯ್ಯನಗೌಡ ರಾಮನಗೌಡ ಗೌಡಪ್ಪಗೌಡರ ಸಿಕ್ಕಿಬಿದ್ದಿದ್ದು, ಇವನಿಂದ ಸುಮಾರು 12 ಕೆಜಿ ಗಾಂಜಾವನ್ನು ವಶಕ್ಕೆ ಪಡೆದು, ಆರೋಪಿಯ ವಿರುದ್ಧ ಗದಗ ವಲಯದ ಅಬಕಾರಿ ನಿರೀಕ್ಷಕ ನಾರಾಯಣಸಾ ಪವಾರ ಅವರು ತನಿಖೆ ಪೂರೈಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಸಾಕ್ಷಿ ವಿಚಾರಣೆ ನಡೆಸಿದ ಗದುಗಿನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜೇಶ್ವರ ಎಸ್ ಶೆಟ್ಟಿ ಇವರು ಪ್ರಕರಣದಲ್ಲಿ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿ ಅಯ್ಯನಗೌಡ ರಾಮನಗೌಡ ಗೌಡಪ್ಪಗೌಡ್ರನಿಗೆ ದಿ.16.09.2023 ರಂದು ಶಿಕ್ಷೆ ವಿಧಿಸಿದ್ದಾರೆ.

ಎನ್‌ಡಿಪಿಎಸ್ ಕಾಯ್ದೆಯ ಕಲಂ 20(ಖ) 20(ಎ) 25, 8 (ಸಿ) ಅಡಿಯಲ್ಲಿ 3 ವರ್ಷ ಕಠಿಣ ಶಿಕ್ಷೆ ಹಾಗೂ 25 ಸಾವಿರ ರೂ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸದರಿ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಮಲ್ಲಿಕಾರ್ಜುನ ಬಸವನಗೌಡ ದೊಡ್ಡಗೌಡ್ರ ಸಾಕ್ಷಿ ವಿಚಾರಣೆ ನಡೆಸಿ ವಾದ ಮಂಡಿಸಿದ್ದರು.

# ರಕ್ತದಾನ ಶಿಬಿರ ಸೆ.24ಕ್ಕೆ




■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇಲ್ಲಿನ ಸೂರಣಗಿ ಗ್ರಾಮದ ನವಚೇತನ ಯುವಕ ಮಂಡಳದವರು ಕಳೆದ 19 ವರ್ಷಗಳಿಂದ ಅನೇಕ ಸಮಾಜಮುಖಿ ಕಾರ್ಯಕ್ರಮಗಳೊಂದಿಗೆ ಸಾರ್ವಜನಿಕ ಗಣೇಶೋತ್ಸವ ಆಚರಿಸುತ್ತಿದ್ದಾರೆ.

ಈ ವರ್ಷ ಸೆ.24ರಂದು ನವಚೇತನ ಯುವಕ ಮಂಡಳ ಸಮುದಾಯ ಭವನ ಉದ್ಘಾಟನೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಮುಂಜಾನೆ 10 ಗಂಟೆಯಿಂದ ಗದಗ ಜಿಲ್ಲಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಸೂರಣಗಿ ಗ್ರಾಮದ ಎಲ್ಲ ಸಂಘ-ಸಂಸ್ಥೆಗಳ ಸದಸ್ಯರು, ಆಶಾ, ಅಂಗನವಾಡಿ, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸದಸ್ಯರ ಸಹಕಾರದಿಂದ ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ಪ್ರಾಥಮಿಕ ಸಮುದಾಯ ಆರೋಗ್ಯ ಕೇಂದ್ರ ಮತ್ತು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಹಯೋಗದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಂಡಿದೆ.

ರಕ್ತದಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ರಕ್ತದಾನ ಮಾಡಿ, ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸಂಘಟಕರು ವಿನಂತಿಸಿದ್ದಾರೆ.

# ನದಾಫ/ಪಿಂಜಾರ ಸಂಘದ ಸದಸ್ಯತ್ವ

■ ವಿಜಯಸಾಕ್ಷಿ ಸುದ್ದಿ, ಗದಗ

ನದಾಫ/ಪಿಂಜಾರ ಸಂಘದ ತಾಲೂಕಾ, ಜಿಲ್ಲಾ ಹಾಗೂ ರಾಜ್ಯ ಘಟಕಗಳ ಆಡಳಿತ ಅವಧಿ 31-03-2024ಕ್ಕೆ ಮುಕ್ತಾಯಗೊಳ್ಳಲಿದ್ದು, ರಾಜ್ಯಾದ್ಯಂತ ತಾಲೂಕಾ, ಜಿಲ್ಲಾ ಹಾಗೂ ರಾಜ್ಯ ಘಟಕಗಳ ಚುನಾವಣೆ ದಿನಾಂಕ ಘೋಷಣೆಯಾಗಿದೆ.

ತಾಲ್ಲೂಕಾ ಘಟಕಕ್ಕೆ ಚುನಾವಣೆಯು 19-11-2023ರಂದು ಜರುಗಲಿದೆ. ತಾಲೂಕಾ ಘಟಕದಲ್ಲಿ ಸೆ.30ರೊಳಗೆ ಸದಸ್ಯತ್ವವನ್ನು ಪಡೆದುಕೊಂಡು, ರಾಜ್ಯ ಘಟಕದಿಂದ ಸದಸ್ಯತ್ವದ ಅನುಮೋದನೆ ಪಡೆದುಕೊಳ್ಳುವುದು ಅವಶ್ಯವಾಗಿದೆ. ಸದರಿ ಅನುಮೋದನೆಗೊಂಡ ಸದಸ್ಯರು ಮಾತ್ರ ಚುನಾವಣೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಆದ್ದರಿಂದ ಗದಗ ತಾಲೂಕಾ ನದಾಫ ಪಿಂಜಾರ ಸಮುದಾಯದವರು ತಾಲೂಕು ಘಟಕಕ್ಕೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಆಧಾರ್ ಕಾರ್ಡ್‌ನೊಂದಿಗೆ ಅರ್ಜಿ ಸಲ್ಲಿಸಿ ಸದಸ್ಯತ್ವ ಪಡೆದುಕೊಳ್ಳಲು ಕೋರಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಶೌಕತ್ ಅಲಿ ಎಂ.ಅಣ್ಣಿಗೇರಿ-9743139799 ಹಾಗೂ ಎಂ.ಬಿನದಾಫ-9916253521 ಇವರನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ.



ಲಕ್ಷ್ಮೇಶ್ವರದ ಶಾಂತಿಧಾಮ ವೃದ್ಧಾಶ್ರಮದಲ್ಲಿನ ಹಿರಿಯರು ಆಶ್ರಮದಲ್ಲಿ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಭಕ್ತಿಯಿಂದ ಪೂಜೆ ಸಲ್ಲಿಸಿದರು.



ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪ.ಪೂ. ಡಾ. ಕಲ್ಲಯ್ಯಜ್ಜನವರು ಉತ್ತರ ಕರ್ನಾಟಕ ಕಲಾವಿದರ ಕನ್ನಡ ರ‍್ಯಾಪ್ ಗೀತೆಯನ್ನು ಬಿಡುಗಡೆಗೊಳಿಸಿದರು. ಸಾಹಿತ್ಯ ರಚಿಸಿ, ಹಾಡಿದ ಕಲಾವಿದ ಪ್ರವೀಣ ಯಮನಪ್ಪ ಬನ್ನಿಗೋಳರಿಗೆ ಕಲ್ಲಯ್ಯಜ್ಜನವರು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ವೀರಯ್ಯ ಹೊಸಮಠ, ವೀರೇಶ ಜಾನೇಕಲ್, ಮೃತ್ಯುಂಜಯ ಗೊಲಪ್ಪನವರ, ಸಂಗಮೇಶ ಹಿರೇಮಠ, ಬಸಯ್ಯ ಹಿರೇಮಠ, ಸಮೀರ ತಾಂಬೂಲಿ ಮುಂತಾದ ಕಲಾವಿದರು ಉಪಸ್ಥಿತರಿದ್ದರು.

## ದತ್ತಿ ಉಪನ್ಯಾಸ ಸಮಾರಂಭದಲ್ಲಿ ಡಾ.ವೀರಸೋಮೇಶ್ವರ ಜಗದ್ಗುರುಗಳು

# ಉಪಜಾತಿಗಳ ವಿಂಗಡಣೆಯಿಂದ ವೀರಶೈವ ಸಮಾಜ ಸೊರಗುತ್ತಿದೆ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಅಖಂಡ ವೀರಶೈವ ಲಿಂಗಾಯತ ಸಮುದಾಯ ದೊಡ್ಡ ಶಕ್ತಿ ಕೇಂದ್ರವಾಗಿದ್ದು, ಸರಿಯಾದ ಮಾರ್ಗದರ್ಶನ ಇಲ್ಲದೇ ಹಾಗೂ ಜಾತಿ ಜಾತಿ ವಿಂಗಡಣೆಯಿಂದ ಸಮುದಾಯ ಸಂಕೀರ್ಣವಾಗುತ್ತಿದೆ. ಕೆಲವು ಶಕ್ತಿಗಳು ಮೂಗಿಗೆ ತುಪ್ಪ ಹಚ್ಚಿ ಸಮುದಾಯವನ್ನು ವಿಂಗಡಿಸುತ್ತಿವೆ. ಇದರ ಬಗ್ಗೆ ವೀರಶೈವ ಲಿಂಗಾಯತ ಸಮುದಾಯ ಎಚ್ಚರಿಕೆಯಿಂದ ಇದ್ದು ಭವಿಷ್ಯದ ಅರಿವಿನಿಂದ ಮುನ್ನಡೆಯಬೇಕೆಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಇಲ್ಲಿನ ಸುಳ್ಳ ಗ್ರಾಮದ ಪಂಚಗೃಹ ಹಿರೇಮಠದಲ್ಲಿ ಶ್ರಾವಣ ಪುರಾಣ ಮಂಗಲೋತ್ಸವದ ಅಂಗವಾಗಿ ವೀರಶೈವ ಜಂಗಮ ಸಂಸ್ಥೆ, ಡಾ. ಮಾಲತಿ ಹಿರೇಮಠ ಟ್ರಸ್ಟ್ ಹಾಗೂ ಕನ್ನಡ ಸಾಹಿತ್ಯ ಪರಿಷತ್‌ನವರು ಶ್ರೀ ಜಗದ್ಗುರು ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಪೀಠಾರೋಹಣದ 32ನೇ ವರ್ಷದ ಸವಿ ನೆನಪಿಗಾಗಿ ಆಯೋಜಿಸಿದ್ದ ಪ್ರಥಮ ದತ್ತಿ ಉಪನ್ಯಾಸ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು. ಕೆಲವು ಸಂಶೋಧಕರಿಗೆ ಸಾಹಿತ್ಯ ರಚನಾಕಾರರಿಗೆ 12ನೇ ಶತಮಾನದ ಪೂರ್ವದ ಪರಂಪರೆ, ಧಾರ್ಮಿಕ ಕ್ರಾಂತಿ, ಸಾಮಾಜಿಕ ಬದಲಾವಣೆ ಕಾಣುತ್ತಿಲ್ಲ. ಬಸವಾದಿ ಶರಣರಿಗೂ ದೀಕ್ಷಾ ಗುರು ಇದ್ದರು. ಗುರು ಪರಂಪರೆ ಕೃಪಾಶೀರ್ವಾದದಿಂದ ಅವರು ಬೆಳೆದು ಬಂದಿದ್ದಾರೆ. ನಿಜಾಂಶಗಳನ್ನು ಮರೆಮಾಚಲಾಗದು. ವಿಷಯದ ಆಳಕ್ಕೆ ಹೋದಾಗ ಸತ್ಯ ಸಂಗತಿಗಳು ತಿಳಿಯುತ್ತವೆ. ವೀರಶೈವ ಲಿಂಗಾಯತ ಬಹು ದೊಡ್ಡ ಸಮುದಾಯವಾಗಿದ್ದು ಇದನ್ನು ಒಡೆಯುವ ಉದ್ದೇಶದಿಂದ ಆಡಿದ ಆಟ ನಡೆದಿಲ್ಲ ಮುಂದೆಯೂ ನಡೆಯುವುದಿಲ್ಲ. ವೀರಶೈವರನ್ನು ಒಡೆಯಬೇಕೆನ್ನುವವರು ಎಚ್ಚರದಿಂದ ಇರಬೇಕು ಎಂದರು.



> ಅನೇಕರು ತಮ್ಮ ಸ್ವಾರ್ಥ ಸಾಧನೆಗಾಗಿ ಜಾತಿ, ಉಪಪಂಗಡ ಹೆಸರಿನಲ್ಲಿ ಅಖಂಡ ವೀರಶೈವ ಸಮಾಜವನ್ನು ಒಡೆಯುವ ಪ್ರಯತ್ನ ಮಾಡುತ್ತಿದ್ದು, ಸಮಾಜ ಜಾಗೃತರಾಗಿರಬೇಕು. ಸಮಾಜದ ಅಖಂಡತೆಯಲ್ಲಿ ದೊಡ್ಡಶಕ್ತಿ ಇದೆ ಎಂಬುದನ್ನು ಎಲ್ಲ ನಾಯಕರು ಅರಿತು ನಡೆಯಬೇಕು. ಜಗತ್ತಿಗೆ ಧರ್ಮವೇ ಬೆಳಕು. ಧರ್ಮವನ್ನು ನಾಶ ಮಾಡುತ್ತೇವೆ ಎಂದರೆ ಅದು ಸತ್ಯದ ನಾಶವೆಂದಂತೆ. ಮನುಷ್ಯನ ಸುಖ-ಸಮೃದ್ಧಿಗೆ ಧರ್ಮ ಬೇಕು. ಧರ್ಮ ಅವಿನಾಶವಾದದ್ದು. ಧರ್ಮ ಹಿಂದೆ ಇತ್ತು, ಇಂದೂ ಇದೆ, ಮುಂದೆಯೂ ಇರುತ್ತದೆ. ಧರ್ಮದ ಕುರಿತು ಯಾರೂ ಅಸಂಬದ್ಧ ಹೇಳಿಕೆ ನೀಡಬಾರದು.
>
> **– ಡಾ.ವೀರಸೋಮೇಶ್ವರ ಜಗದ್ಗುರುಗಳು.**
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಅಧ್ಯಕ್ಷತೆ ವಹಿಸಿದ್ದ ಸುಳ್ಳ ಪಂಚಗೃಹ ಹಿರೇಮಠದ ಶಿವಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಪ್ರತಿಯೊಬ್ಬರೂ ಧರ್ಮ ಮಾರ್ಗದಲ್ಲಿ ನಡೆದಾಗ ಜೀವನದಲ್ಲಿ ಯಶಸ್ಸು ದೊರೆಯುತ್ತದೆ ಎಂದರು. ಸಮಾರಂಭದಲ್ಲಿ ಹೂಲಿ ಸಾಂಬಯ್ಯನಮಠದ ಉಮೇಶ್ವರ ಶಿವಾಚಾರ್ಯರು, ಶಿರಕೋಳ ಹಿರೇಮಠದ ಗುರುಸಿದ್ದೇಶ್ವರ ಶಿವಾಚಾರ್ಯರು ಉಪದೇಶಾಮೃತ ನೀಡಿದರು. ಶಾಸಕ ಎನ್.ಹೆಚ್ ಕೋನರಡ್ಡಿ, ಮಾತನಾಡಿದರು. ಸಂಶೋಧಕರಾದ ಡಾ. ಎ.ಸಿ ವಾಲಿ ಶ್ರೀ ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಧಾರ್ಮಿಕ, ಸಾಮಾಜಿಕ, ಸಾಹಿತ್ಯದ ಕೊಡುಗೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಬ್ಯಾಹಟ್ಟಿಯ ಮರುಳಸಿದ್ದ ಶಿವಾಚಾರ್ಯರು, ಜಿ.ಪಂ ಮಾಜಿ ಉಪಾಧ್ಯಕ್ಷ ಶಿವಾನಂದ ಕರಿಗಾರ, ವೀರಶೈವ ಜಂಗಮ ಸಂಸ್ಥೆ ಉಪಾಧ್ಯಕ್ಷ ಮೃತ್ಯುಂಜಯ ಕೋರಿಮಠ, ಗುರುನಗೌಡ ರಾಯನಗೌಡ್ರು, ಯಶವಂತ್ ಕುಲಕರ್ಣಿ, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಪ್ರೊ. ಕೆ.ಎಸ್ ಕೌಜಲಗಿ ಸೇರಿದಂತೆ ಇತರರು ಇದ್ದರು.

ವೇ.ಸಿದ್ದರಾಮಯ್ಯ ಹಿರೇಮಠ ಪುರಾಣ ಮಂಗಲಗೊಳಿಸಿದರು. ಜಂಗಮ ಸಂಸ್ಥೆ ಅಧ್ಯಕ್ಷ ಡಾ. ಸುರೇಶ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ್ ಅಂಗಡಿ ಸ್ವಾಗತಿಸಿದರು. ಎಂ.ಎಸ್ ಶಿವಳ್ಳಿಮಠ ನಿರೂಪಿಸಿದರು. ಗುರುಸಿದ್ದಯ್ಯ ಸವದಿಮಠ ಪ್ರಾರ್ಥಿಸಿದರು. ಸಣಕಲ್ಲಪ್ಪ ಒಂಟಿ ವಂದಿಸಿದರು.

> ಧರ್ಮವು ಶಾಶ್ವತ, ನಿತ್ಯ ನಿರಂತರವಾಗಿದೆ. ವೀರಶೈವ ಧರ್ಮಕ್ಕೆ ಪರಮಾಚಾರ್ಯರ ಕೊಡುಗೆ ಅಪಾರವಾಗಿದೆ. ಧಾರ್ಮಿಕ, ಸಾಂಸ್ಕೃತಿಕ ಶ್ರೀಮಂತಿಕೆ ಪಂಚಪೀಠಗಳ ಕೊಡುಗೆಯಾಗಿದೆ. ಧರ್ಮ ಜಾಗೃತಿ ಜೊತೆಗೆ ಸಾಮಾಜಿಕ ಸತ್ಕ್ರಾಂತಿ ಮಾಡಿದ ಕೀರ್ತಿ ಗುರು ಪರಂಪರೆಗೆ ಸಲ್ಲುತ್ತದೆ. ಪಂಚಪೀಠಗಳು ಆದಿಕಾಲದಿಂದಲೂ ಧರ್ಮ ರಕ್ಷಣೆ, ಸಾಮಾಜಿಕ ಸುಧಾರಣೆಗೆ ಮಾರ್ಗದರ್ಶನ ಮಾಡಿವೆ. ಅಕ್ಟೋಬರ್ 15 ರಿಂದ 24ರ ವರೆಗೆ ರಾಯಚೂರ ಜಿಲ್ಲೆ ಲಿಂಗಸುಗೂರಿನಲ್ಲಿ ಜರುಗುವ ಶ್ರೀ ರಂಭಾಪುರಿ ಜಗದ್ಗುರುಗಳ 32ನೇ ವರ್ಷದ ದಸರಾ ಧರ್ಮ ಸಮಾರಂಭದಲ್ಲಿ ಎಲ್ಲ ಭಕ್ತರು ಭಾಗವಹಿಸಬೇಕೆಂದು ಜಗದ್ಗುರುಗಳು ತಿಳಿಸಿದರು.

# ಭಯ ತೊರೆದು ಪ್ರತಿಭೆ ಪ್ರದರ್ಶಿಸಿ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಮಕ್ಕಳಲ್ಲಿನ ಹಿಂಜರಿಕೆಯ ಭಾವನೆ ದೂರವಾದಾಗ ಮಾತ್ರ ವರಲ್ಲಿನ ಪ್ರತಿಭೆಗಳು ಹೊರಬರಲು ಸಾಧ್ಯವಾಗುತ್ತದೆ. ಮಕ್ಕಳಲ್ಲಿ ಅನೇಕ ಪ್ರತಿಭೆಗಳು ಅಡಗಿರುತ್ತವೆ. ಅವುಗಳನ್ನು ಗುರುತಿಸುವ ಜವಾಬ್ದಾರಿ ಶಿಕ್ಷಕರದ್ದು. ಆದರೆ ಮಕ್ಕಳೇ ಪ್ರತಿಭೆಯನ್ನು ಹೊರಹಾಕಲು ಹಿಂದೇಟು ಹಾಕಬಾರದು ಎಂದು ಪ.ಪಂ ಸದಸ್ಯ ಕೆ.ಎಲ್ ಕರಿಗೌಡರ ಹೇಳಿದರು.

ಅವರು ಪಟ್ಟಣದ ಸರಕಾರಿ ಪ್ರೌಢಶಾಲೆ(ಆರ್‌ಎಂಎಸ್‌ಎ)ಯಲ್ಲಿ ಮುಳಗುಂದ ಕ್ಲಸ್ಟರ್ ಮಟ್ಟದ ಪ್ರೌಢಶಾಲಾ ಹಂತದ ಪ್ರತಿಭಾ ಕಾರಂಜಿ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ ನಡುವಿನಮನಿ ಮಾತನಾಡಿ, ಮಕ್ಕಳ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸುವ ಮೂಲ ಉದ್ದೇಶದಿಂದ ಪ್ರತಿಭಾ ಕಾರಂಜಿ ಹಮ್ಮಿಕೊಂಡಿದ್ದು, ಪ್ರತಿಭಾ ಕಾರಂಜಿಯಿಂದ ಇಂದು ಸಾಕಷ್ಟು ಮಕ್ಕಳು ಹಲವು ಟಿ.ವಿ ಚಾನೆಲ್‌ಗಳ ಮೂಲಕವೂ ಗುರುತಿಸಿಕೊಳ್ಳುವಂತಾಗಿದೆ. ನಮ್ಮ ಕಲೆ, ಸಂಸ್ಕೃತಿ, ಸಾಹಿತ್ಯ, ಗ್ರಾಮೀಣ ಸೊಗಡುಗಳು ಇದರಲ್ಲಿ ಅಡಕವಾಗಿರುತ್ತದೆ ಎಂದರು.



ಎಸ್‌ಡಿಎಂಸಿ ಅಧ್ಯಕ್ಷ ಮಾಹಾದೇವಪ್ಪ ಮಾನೇಗಾರ, ಪ.ಪಂ ಸ್ಥಾಯಿ ಸಮಿತಿ ಅಧ್ಯಕ್ಷ ಮಾಹಾಂತೇಶ ಕೆಂಚನಾಯ್ಕರ್, ಮಾಹಾದೇವಪ್ಪ ಗಡಾದ, ನೀಲಮ್ಮ ಅಸುಂಡಿ, ಅಶೋಕ ಹುಣಶಿಮರದ, ಪ್ರಧಾನ ಗುರು ರವಿ ಡಂಬಳ, ಸಿಆರ್‌ಪಿ ಎಂ.ಎಂ ನಿಂಬನಾಯ್ಕರ್, ಜೆ.ಎ ಭಾವಿಕಟ್ಟಿ, ಶಂಕರ ಹಡಗಲಿ, ಎಸ್.ಕೆ ಹವಾಲ್ದಾರ, ವಿ.ಸಿ ನೆರೆಗಲ್ಲಮಠ, ಎಸ್.ಜಿ ಗದ್ದಿಗೌಡರ, ಟಿ.ಎಸ್ ಪವಾರ, ಗೀತಾ ಕುಂದರಗಿ, ಶೀರಿನ್ ತಾಜ್, ಎಸ್.ಬಿ ತಿಮ್ಮಾಪೂರ, ಎಲ್.ಡಿ ರಾಠೋಡ ಮುಂತಾದವರಿದ್ದರು.

# ಮಾಗಡಿಯಲ್ಲಿ ಚಂದ್ರಯಾನ-3 ಮಾದರಿಯ ವಿನೂತನ ಗಣೇಶ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿ ತಾಲೂಕಿನ ಮಾಗಡಿ ಗ್ರಾಮದ ಶ್ರೀ ಅರಳಿಕಟ್ಟಿ ಗಜಾನನ ಭಕ್ತ ವೃಂದದವರು ಕಳೆದ 25 ವರ್ಷಗಳಿಂದ ಗಣೇಶ ಪ್ರತಿಷ್ಠಾಪನೆಯನ್ನು ಮಾಡುತ್ತಾ ಬಂದಿದ್ದು, ಈ ಬಾರಿ ಪ್ರಾಸಂಗಿಕ ವಿಶೇಷತೆಯ ಚಂದ್ರಯಾನದ-3ರ ಬಾಹ್ಯಾಕಾಶ ನೌಕೆಯ ಜಿಎಸ್‌ಎಲ್‌ವಿ ಎಂಕೆ-3 ಮಾದರಿಯನ್ನು ವಿನ್ಯಾಸಗೊಳಿಸಿ ಇಸ್ರೋದ ಪ್ರಥಮ ಅಧ್ಯಕ್ಷ ವಿಕ್ರಂ ಸಾರಾಬಾಯಿ ಅವರಿಂದ ಹಿಡಿದು ಇತ್ತೀಚಿನ ಎಸ್.ಸೋಮನಾಥ ಅವರವರೆಗೆ 11 ಅಧ್ಯಕ್ಷರುಗಳ ಭಾವಚಿತ್ರದೊಂದಿಗೆ ಅವರ ಅಧಿಕಾರಾವಧಿ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಸಾಧನೆಯನ್ನು ವಿವರಿಸುವ ಮಾಹಿತಿಯನ್ನು ಪ್ರದರ್ಶಿಸಿದ್ದಾರೆ.



ಇದನ್ನು ಶಾಲಾ-ಕಾಲೇಜು ವಿದ್ಯಾರ್ಥಿಗಳು ಆಸಕ್ತಿಯಿಂದ ಗಮನಿಸುತ್ತಿದ್ದು, ಭಾರತದ ಬಾಹ್ಯಾಕಾಶ ವಿಜ್ಞಾನ ಸಾಧನೆಗಳ ಬಗ್ಗೆ ಹೆಮ್ಮೆ ಪಡುತ್ತಿದ್ದಾರೆ.

ಧಾರ್ಮಿಕ ಆಚರಣೆಗಳಲ್ಲಿಯೂ ಕೂಡ ವಿಜ್ಞಾನ-ತಂತ್ರಜ್ಞಾನದ ಅರಿವು ಮೂಡುವಂತೆ ಮಾಡಿ, ಮಕ್ಕಳಲ್ಲಿ ವೈಜ್ಞಾನಿಕ ಮತ್ತು ವೈಚಾರಿಕತೆ ಪ್ರಜ್ಞೆ ಮೂಡಿಸುವಲ್ಲಿ ಶ್ರೀ ಅರಳಿಕಟ್ಟಿ ಗಜಾನನ ಭಕ್ತವೃಂದದ ಯುವಕರ ಕಾರ್ಯವನ್ನು ಗ್ರಾಮದ ಹಿರಿಯ ಪ್ರಶಂಸಿಸುತ್ತಿದ್ದಾರೆ.

ಇದರೊಂದಿಗೆ ಸ್ವಯಂ ರಕ್ತದಾನ ಶಿಬಿರವನ್ನು ಕೂಡ ಆಯೋಜನೆ ಮಾಡಿದ್ದಾರೆ.

# ಸನಾತನ ಧರ್ಮವೆಂದಿಗೂ ಅಳಿಯದು



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಯಾವುದೇ ಧರ್ಮವನ್ನು ನಾಶ ಮಾಡಿ ಎನ್ನುವುದು ಘೋರ ಅಪರಾಧ. ಸನಾತನ ಧರ್ಮಕ್ಕೆ ತನ್ನದೇ ಆದ ಇತಿಹಾಸವಿದೆ. ಮಾನವ ಸಂಸ್ಕೃತಿ ಅಳಿದರೂ ಸನಾತನ ಧರ್ಮವೆಂದಿಗೂ ಅಳಿಯದು ಎಂದು ನಿವೃತ್ತ ಮುಖ್ಯ ಶಿಕ್ಷಕ ಸಿ.ವಿ ವಂಕಲಕುಂಟಿ ಹೇಳಿದರು.

ಇಲ್ಲಿನ ಶ್ರೀ ರೇಣುಕಾಚಾರ್ಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ನಡೆದ ನಿವೃತ್ತ ನೌಕರರ ಮತ್ತು ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಮಾಸಿಕ ಸಭೆಯಲ್ಲಿ ಅವರು ಸನಾತನ ಧರ್ಮ ಕುರಿತು ಉಪನ್ಯಾಸ ನೀಡಿದರು.

ಎಂ.ಎ ಹಿರೇವಡೆಯರ ಮಾತನಾಡಿ ಸತ್ಯ, ಅಸತ್ಯವನ್ನು ತಿಳಿದವನನ್ನು ಅನುಭಾವಿ ಎನ್ನುತ್ತೇವೆ. ಈ ಅನುಭಾವಿಗೆ ಲೋಕದ ಸರ್ವ ಜನರ ಸುಖ ಸಂತೋಷಗಳೇ ಮುಖ್ಯವಾಗುತ್ತವೆ. ಹಿರಿಯರ ನಾಗರಿಕರು ಎಂದಿಗೂ ಸತ್ಯ ಸಂಶೋಧನೆಯೆಡೆಗೆ ಗಮನ ನೀಡಬೇಕಾದುದು ಅವಶ್ಯಕ ಎಂದರು.

ಸಂಘದ ಉಪಾಧ್ಯಕ್ಷ ಡಿ.ಎ ಅರವಟಗಿಮಠ ಮಾತನಾಡಿ, ಅಕ್ಟೋಬರ್ 1ರಂದು ಗದಗನಲ್ಲಿ ಹಿರಿಯ ನಾಗರಿಕರ ದಿನಾಚರಣೆ ಜರುಗಲಿದೆ. ಇದರ ಪ್ರಯುಕ್ತ ಸೆ.26ರಂದು ಹಿರಿಯ ಮಹಿಳಾ ಮತ್ತು ಪುರುಷ ನಾಗರಿಕರಿಗೆ ಅನೇಕ ಆಟೋಟಗಳು ನಡೆಯಲಿದ್ದು ಅದರಲ್ಲಿ ಪಾಲ್ಗೊಳ್ಳಲು ಪ್ರಯತ್ನಿಸಬೇಕೆಂದರು.

ಸಂಘದ ಅಧ್ಯಕ್ಷ ಡಾ. ಆರ್.ಕೆ ಗಚ್ಚಿನಮಠ ಅಧ್ಯಕ್ಷತೆ ವಹಿಸಿದ್ದರು. ಅರುಣ ಬಿ.ಕುಲಕರ್ಣಿ, ವಿ. ವಿ ಕೆರಿಯವರ, ಕೆ.ಕೆ ದಾಸರ, ಎಸ್.ವಿ ಧಮಾಯತ, ಬಿ.ಎ ಕಲಾಲಬಂಡಿ, ವಿ.ಎಸ್ ಕೊಟಗಿ, ಚಂದ್ರಾಮ ಗ್ರಾಮಪುರೋಹಿತ ಮತ್ತಿತರರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಎಂ.ಎಸ್ ದಢೇಸೂರಮಠ ಬೀಚಿ ಬಳಗದ ದಶಮಾನೋತ್ಸವ ಕಾರ್ಯಕ್ರಮದ ಕುರಿತು ಮಾತನಾಡಿದರು. ಜಿ.ಎ ಬೆಲ್ಲದ ಪ್ರಾರ್ಥಿಸಿದರು. ವಿ.ವಿ ಕೆರಿಯವರ ಸ್ವಾಗತಿಸಿದರು. ಕಾರ್ಯದರ್ಶಿ ಎಸ್.ಕೆ ಪಾಟೀಲ ನಿರೂಪಿಸಿದರು. ಶಿವಯೋಗಿ ಜಕ್ಕಲಿ ವಂದಿಸಿದರು.

## ಅನುದಾನ ರಹಿತ ಶಾಲಾ ಆಡಳಿತ ಮಂಡಳಿಯ ಒಕ್ಕೂಟದ ಕಾರ್ಯಕ್ರಮದಲ್ಲಿ ಸಚಿವ ಶಿವರಾಜ್ ತಂಗಡಗಿ

# ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಿ



■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಶಿಕ್ಷಕ ವೃತ್ತಿ ಹಾಗೂ ವೈದ್ಯ ವೃತ್ತಿ ಅತ್ಯಂತ ಪವಿತ್ರ ವೃತ್ತಿ. ಒಬ್ಬರು ಜೀವನ ಕಟ್ಟಿಕೊಟ್ಟರೆ ಇನ್ನೊಬ್ಬರು ಜೀವ ಉಳಿಸುವ ಕೆಲಸ ಮಾಡುತ್ತಾರೆ. ಎಲ್ಲರೂ ಸಹ ತಮ್ಮ ಗುರುಗಳನ್ನು ಗೌರವದಿಂದ ಕಾಣುತ್ತೇವೆ ಹಾಗೂ ಅವರನ್ನು ನೆನಪಿಸಿಕೊಳ್ಳುತ್ತೇವೆ ಎಂದು ಜಿಲ್ಲಾ ಉಸ್ತುವಾರಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಅವರು ಭಾಗ್ಯನಗರದ ಪಾನಘಂಟಿ ಕಲ್ಯಾಣ ಮಂಟಪದಲ್ಲಿ ಕೊಪ್ಪಳ ತಾಲೂಕಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಯ ಒಕ್ಕೂಟದಿಂದ ಹಮ್ಮಿಕೊಳ್ಳಲಾಗಿದ್ದ ಶಿಕ್ಷಕರ ದಿನಾಚರಣೆ ಹಾಗೂ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶಾಸಕ ಕೆ. ರಾಘವೇಂದ್ರ ಹಿಟ್ನಾಳ, ದಾನಗಳಲ್ಲಿ ವಿದ್ಯಾದಾನವೇ ಶ್ರೇಷ್ಠ. ಶಿಕ್ಷಕರು ಕೇವಲ ಶಿಕ್ಷಕರಲ್ಲ, ದೇಶದ ನಿರ್ಮಾಪಕರು. ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಎಲ್ಲರೂ ಕೆಲಸ ಮಾಡಬೇಕಾಗಿದೆ. ಅನುದಾನ ರಹಿತ ಶಾಲೆಗಳಿಗೂ ಸಹಾಯ ಮಾಡಿದರೆ ಇನ್ನಷ್ಟು ಉತ್ತಮ ಶಿಕ್ಷಣ ನೀಡಲು ಸಾಧ್ಯ. ನಿಮ್ಮ ಸಂಸ್ಥೆಗಳ ಜೊತೆಗೆ ನಾವಿರುತ್ತೇವೆ ಎಂದು ಭರವಸೆ ನೀಡಿದರು.

ಕೊಪ್ಪಳ ವಿಶ್ವ ವಿದ್ಯಾಲಯದ ಉಪಕುಲಪತಿ ಬಿ.ಕೆ ರವಿ ಸಂವಿಧಾನ ಪೀಠಿಕೆ ಓದಿಸಿ ಉಪನ್ಯಾಸ ನೀಡಿದರು. ವೇದಿಕೆಯ ಮೇಲೆ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಚೈತನ್ಯಾನಂದ ಸ್ವಾಮೀಜಿ, ಬ್ರಹ್ಮಕುಮಾರಿ ಯೋಗಿನಿ ಅಕ್ಕ, ಭಾಗ್ಯನಗರ ಶಂಕರಾಚಾರ್ಯ ಮಠದ ಶ್ರೀ ಪ್ರಕಾಶಾನಂದ ಮಹಾಸ್ವಾಮಿಗಳು, ವಿ.ಪ ಸದಸ್ಯೆ ಹೇಮಲತಾ ನಾಯಕ್, ಸಹಾಯಕ ಆಯುಕ್ತ ಮಹೇಶ ಮಾಲಗಿತ್ತಿ, ತಹಸೀಲ್ದಾರ್ ವಿಠ್ಠಲ್ ಚೌಗಲೆ, ಅವರ್ ಸ್ಕೂಲ್ ಸಂಘಟನೆ ರಾಜ್ಯ ಕಾರ್ಯದರ್ಶಿ ಪ್ರಭಾಕರ್ ಅರಸ್, ಮುಖಂಡರುಗಳಾದ ರಾಘವೇಂದ್ರ ಪಾನಘಂಟಿ, ಕುಸ್ಮಾ ಅಧ್ಯಕ್ಷ ಶಾಹೀದ್ ಎಸ್.ತಹಸೀಲ್ದಾರ, ಬಸವರಾಜ ಬಳ್ಳೊಳ್ಳಿ ಇತರರು ಉಪಸ್ಥಿತರಿದ್ದರು. ಸುರೇಶ ಕುಂಬಾರ ಸ್ವಾಗತಿಸಿದರು, ಎ.ಕೆ ಮುಲ್ಲಾನವರ ನಿರೂಪಿಸಿದರು, ನಾಗರಾಜ ಗುಡಿ ವಂದಿಸಿದರು.

# ಬೀದಿ ಬದಿ ವ್ಯಾಪಾರಿಗಳಿಂದ ಸಾರ್ವಜನಿಕ ಗಜಾನನ ಪ್ರತಿಷ್ಠಾಪನೆ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ತಿಲಕ ಪಾರ್ಕ್ ಹತ್ತಿರುವಿರುವ ಹಣ್ಣು ಮತ್ತು ತರಕಾರಿ ಮಾರುಕಟ್ಟೆಯಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಮಕ್ತುಂಸಾಬ ನಾಲಬಂದ ಅವರು ಮಾತನಾಡಿ, ನಮ್ಮ ಸಂಘಟನೆಯು ಸಾರ್ವಜನಿಕ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುತ್ತಾ ಬಂದಿದ್ದು, ಎಲ್ಲ ಧರ್ಮದ ಸದಸ್ಯರನ್ನೊಳಗೊಂಡು ಭಾವೈಕ್ಯತೆಯ ಸಂದೇಶ ನೀಡುತ್ತಿದೆ ಎಂದರು.

ಮಹಿಳಾ ಜಿಲ್ಲಾಧ್ಯಕ್ಷೆ ರಶೀದಾ ಭಾಷಾಸಾಬ ನದಾಫ ಮಾತನಾಡಿ, ಈ ಬಾರಿ ಗಜಾನನ ಪ್ರತಿಷ್ಠಾಪನೆಗೆ ಬೀದಿ ವ್ಯಾಪಾರಿಗಳ ಮಹಿಳಾ ಸದಸ್ಯರು ಕೂಡಾ ಭಾಗವಹಿಸುತ್ತಿದ್ದು ಖುಷಿ ತಂದಿದೆ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಜಹಾಂಗೀರ ಅಹ್ಮದ, ಭಾಷಾಸಾಬ ಮಲ್ಲಸಮುದ್ರ, ಮಂಜುನಾಥ ಕುರ್ತಕೋಟಿ, ಮೈಲಾರಗೌಡ ಹುಚ್ಚನಗೌಡ್ರ, ಶಿವಾನಂದ ಬನಹಟ್ಟಿ, ಲಾಲಸಾಬ ಗಂಧದ, ವಿನೋದ ಮರಡಿ, ನಿಂಗನಗೌಡ ಪಾಟೀಲ, ಅಬ್ದುಲ್ ರೆಹಮಾನ ರಾಟಿ, ಭಾಷಾಸಾಬ ನದಾಫ, ಮಹಮ್ಮದ ಬರದೂರ, ಅಬ್ಬು ಹುಯಿಲಗೋಳ, ನವೀನ ಬಂಡಾರಿ, ಯೂಸೂಫ ಶಿರಹಟ್ಟಿ, ಶಿವಾಜಿ ಮಧುರಕರ, ಬುಡ್ಡೇಲಿ ಅತ್ತಾರ, ಮಾರುತಿ ಸೋಳಂಕಿ, ಮಾಬುಲಿ ಧಾರವಾಡ, ಫಯಾಜ ನಾರಾಯಣಕೇರಿ, ಉಮರ ಎಲಿಗಾರ, ಶೌಕತ ನದಾಫ, ಅಕ್ಬರ ಅಕ್ಕಿಹೋಳಿ, ಶಾರೂಖ ಕರ್ನಾಚಿ, ಯಲ್ಲಪ್ಪ ಸಾತಪತಿ, ರಜೀಯಾ ಹತ್ತಿವಾಲೆ, ಕುತ್ತೇಜಾ ದೊಡ್ಡಮನಿ, ರಾಮವ್ವ ಲಮಾಣಿ, ಯಲ್ಲವ್ವ ತಳವಾರ, ಲಕ್ಷ್ಮವ್ವ ಬೆನಹಾಳ ಮುಂತಾದವರು ಉಪಸ್ಥಿತರಿದ್ದರು.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಗಜಮುಖನೆ ಸಿದ್ಧಿದಾಯಕನೆ ವಂದಿಪೆ ನಿನಗೆ




ಸೂರಣಗಿ ಗ್ರಾಮದ ನವಚೇತನ ಯುವಕ ಮಂಡಳದಿಂದ ಪ್ರತಿಷ್ಠಾಪಿಸಿರುವ ವಿನಾಯಕನ ಮೂರ್ತಿ.




ಲಕ್ಷ್ಮೇಶ್ವರದ ಸೊಪ್ಪಿನಕೇರಿ ಓಣಿಯಲ್ಲಿನ ಸಿಂಹಾಸನಾರೂಢ 15 ಅಡಿ ಎತ್ತರದ ಲಂಬೋದರನ ಮೂರ್ತಿ



ಲಕ್ಷ್ಮೇಶ್ವರದ ಪೇಟೆ ಆಂಜನೇಯ ದೇವಸ್ಥಾನದ ಮುಂದೆ ಹಿಂದೂ ಮಹಾಸಭಾ ವೇದಿಕೆಯಿಂದ ಪ್ರತಿಷ್ಠಾಪಿಸಿರುವ ಲಕ್ಷ್ಮೇಶ್ವರ ಕಾ ರಾಜಾ 21 ಅಡಿ ಎತ್ತರದ ಮೂರ್ತಿ.



ಲಕ್ಷ್ಮೇಶ್ವರದ ಅಂಬೇಡ್ಕರ ನಗರದಲ್ಲಿ ದಲಿತ ಸಂಘರ್ಷ ಸಮಿತಿಯಿಂದ ಪ್ರತಿಷ್ಠಾಪಿಸಲ್ಪಟ್ಟಿರುವ ಗೌರಿಸುತನ ಮೂರ್ತಿ.



ಲಕ್ಷ್ಮೇಶ್ವರ ಸೋಮೇಶ್ವರ ತೇರಿನ ಮನೆ ಹತ್ತಿರದ ಕೃಷ್ಣದ ಕೊಳಲ ಮೇಲೆ ನಿಂತಿರುವ ವಿಘ್ನೇಶ್ವರ ಮೂರ್ತಿ.




ಶಿಗ್ಲಿ ಗ್ರಾಮದಲ್ಲಿ ಪ್ರತಿಷ್ಠಾಪಿಸಿರುವ ಶಿಗ್ಲಿ ಕಾ ಯುವರಾಜ ಗಜರಾಜ.



ಲಕ್ಷ್ಮೇಶ್ವರ ಸಮಗಾರ ಹರಳಯ್ಯ ಯುವಕ ಸಂಘದ ಏಕದಂತ.



ಲಕ್ಷ್ಮೇಶ್ವದ ಬಸ್ತಿಕೇರಿ ಓಣಿಯ ಸಿಂಹಾರೂಢ ಗಣೇಶನ ಮೂರ್ತಿ.



ರಾಘವೇಂದ್ರ ಯುವ ಮಂಡಳದಿಂದ ಪ್ರತಿಷ್ಠಾಪಿಸಿರುವ ಸಂಕಷ್ಟಹರ ಗಣಪತಿ.

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೇಶದಾದ್ಯಂತ ಆಚರಿಸಲ್ಪಡುವ ಹಬ್ಬಗಳಲ್ಲಿ ಗೌರಿ-ಗಣೇಶ ಹಬ್ಬ ಅತ್ಯಂತ ಮಹತ್ವ ಪಡೆದುಕೊಂಡಿದೆ. ಬಡವ-ಬಲ್ಲಿದ, ಗ್ರಾಮ-ಮಹಾನಗರಗಳೆಂಬ ವ್ಯತ್ಯಾಸವಿಲ್ಲದೆ, ಎಲ್ಲೆಡೆಗೂ ಸಂಭ್ರಮ, ಸಡಗರ ಮನೆ ಮಾಡಿರುತ್ತದೆ. ಮನೆಮನೆಗಳಲ್ಲಿಯೂ ಅದೇ ಸಡಗರದಿಂದ ಗಣೇಶನನ್ನು ಪ್ರತಿಷ್ಠಾಪಿಸಿ ಪೂಜಿಸುವುದು ಒಂದೆಡೆಯಾದರೆ, ಸಾರ್ವಜನಿಕ ಸ್ಥಳಗಳಲ್ಲಿ ಆಯಾ ಪ್ರದೇಶದವರೆಲ್ಲರೂ ಕೂಡಿ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಭಕ್ತಿಯಿಂದ ಪೂಜಿಸುತ್ತಾರೆ. ಅಂತೆಯೇ ಲಕ್ಷ್ಮೇಶ್ವರದಲ್ಲಿಯೂ ಕೂಡ ಅಷ್ಟೇ ಸಡಗರದಿಂದ ಗಣೇಶನ ಮೂರ್ತಿಯನ್ನು ಸ್ಥಾಪಿಸಿ, ಸಕಲ ಕಂಟಕಗಳನ್ನು ನಿವಾರಿಸುವಂತೆ ಭಕ್ತಿಯಿಂದ ಪ್ರಾರ್ಥಿಸುತ್ತಿದ್ದಾರೆ.

ಅಂದಹಾಗೆ, ಒಂದೊಂದು ಪ್ರದೇಶದಲ್ಲಿಯೂ ಭಕ್ತರ ಅಭೀಷ್ಟೆಯಂತೆ ಗಣಪ ಬೇರೆ ಬೇರೆಯ ರೂಪವನ್ನೇ ಧರಿಸಿ ಬಂದಿದ್ದಾನೆ! ಒಂದಕ್ಕಿಂತಲೂ ಒಂದು ಗಣೇಶ ವೈಶಿಷ್ಟ್ಯತೆಯಿಂದ ಕೂಡಿದ್ದು, ಭಕ್ತಾದಿಗಳು ಅಂತಹ ಸಾರ್ವಜನಿಕ ಗಣೇಶನ ದರ್ಶನ ಪಡೆದು ಕೃತಾರ್ಥರಾಗುತ್ತಿದ್ದಾರೆ.

## ಪ್ರವಾದಿ ಪೈಗಂಬರ ಜಯಂತಿ ಆಚರಣೆಯ ಪೂರ್ವಭಾವಿ ಸಭೆ ಇಂದು





■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅಂಜುಮನ್ ಇಸ್ಲಾಂ ಸಂಸ್ಥೆಯ ವತಿಯಿಂದ ಸೆ.28ರಂದು ಅವಳಿ ನಗರದಲ್ಲಿ ಪ್ರವಾದಿ ಪೈಗಂಬರರ ಜಯಂತಿ ಆಚರಿಸಲಾಗುತ್ತಿದ್ದು, ಅವಳಿ ನಗರದಲ್ಲಿ ವೇದಿಕೆ ಕಾರ್ಯಕ್ರಮ, ಮೆರವಣಿಗೆ, ಅನ್ನ ಸಂತರ್ಪಣೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ರಾಜ್ಯ ಸರ್ಕಾರದ ಸುತ್ತೋಲೆ ಹಾಗೂ ಪೊಲೀಸ್ ಇಲಾಖೆಯ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಗದಗ-ಬೆಟಗೇರಿ ಅಂಜುಮನ್ ಇಸ್ಲಾಂ ಸಂಸ್ಥೆಯ ಅಧ್ಯಕ್ಷರು ಹಾಗೂ ಸದಸ್ಯರ ನೇತೃತ್ವದಲ್ಲಿ ನಗರದ ಉರ್ದು ಸೆಂಟ್ರಲ್ ಶಾಲೆ ನಂ.2ರಲ್ಲಿ ಗುರುವಾರ ಸಾಯಂಕಾಲ 5 ಗಂಟೆಗೆ ಪೂರ್ವಭಾವಿ ಸಭೆ ಕರೆಯಲಾಗಿದೆ. ಸಮಾಜ ಬಾಂಧವರು, ಜಮಾತಗಳು ಹಾಗೂ ಸಮಾಜದ ಮುಖಂಡರು, ಯುವಕರು ಪಾಲ್ಗೊಂಡು ಪೂರ್ವಭಾವಿ ಸಭೆಯನ್ನು ಯಶಸ್ವಿಗೊಳಿಸಲು ಮಹಮ್ಮದ ಯೂಸೂಫ ನಮಾಜಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರೌಢಶಾಲಾ ಕಟ್ಟಡ ನಿರ್ಮಾಣಕ್ಕೆ ಭೂದಾನ



■ ವಿಜಯಸಾಕ್ಷಿ ಸುದ್ದಿ, ರೋಣ

ದಶಕಗಳಿಂದ ಮುಗುಳಿ ಗ್ರಾಮದಲ್ಲಿ ಆವರಿಸಿದ್ದ ಸಮಸ್ಯೆಗೆ ಪರಿಹಾರ ದೊರಕಿದ್ದು, ಗ್ರಾಮದ ಮಹಿಳೆಯೊಬ್ಬರು ಪ್ರೌಢಶಾಲಾ ಕಟ್ಟಡ ನಿರ್ಮಾಣಕ್ಕೆ ಭೂದಾನ ಮಾಡುವ ಮೂಲಕ ಸಹಕಾರ ನೀಡಿದ್ದಾರೆ.

ತಾಲೂಕಿನ ಮುಗುಳಿ ಗ್ರಾಮದಲ್ಲಿ ದಶಕಗಳ ಹಿಂದೆ ಪ್ರೌಡ ಶಾಲಾ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿತ್ತು.

ಆಗಿನ ಸಂದರ್ಭದಲ್ಲಿ ಗುರುತಿಸಿದ್ದ ಜಾಗೆ ಕಟ್ಟಡ ಕಟ್ಟಲು ಸೂಕ್ತವಲ್ಲ ಎಂದು ಹಾಗೆಯೇ ಬಿಡಲಾಗಿತ್ತು.

ಇದರಿಂದ ಗ್ರಾಮದ 9 ಹಾಗೂ 10ನೇ ತರಗತಿಯ ವಿದ್ಯಾರ್ಥಿಗಳು ಪ್ರಾಥಮಿಕ ಶಾಲಾ ಆವರಣದಲ್ಲಿ ಶಿಕ್ಷಣ ಪಡೆಯುವ ಸ್ಥಿತಿ ನಿರ್ಮಾಣವಾಗಿತ್ತು. ಈ ಕುರಿತು ಎಚ್ಚೆತ್ತ ಶಿಕ್ಷಣ ಇಲಾಖೆ ಬೆಳಿಗ್ಗೆ ಪ್ರಾಥಮಿಕ ಶಾಲೆ ಮದ್ಯಾಹ್ನ ಪ್ರೌಢಶಾಲೆಯ ತರಗತಿಗಳನ್ನು ನಡೆಸಬೇಕು ಎಂದು ಆದೇಶ ಹೊರಡಿಸಿತ್ತು.

ಈ ಸಮಸ್ಯೆಯನ್ನು ಅರಿತ ಗ್ರಾಮದ ರೈತ ಮಹಿಳೆ ಗುರುಬಸ್ಸವ್ವ ಶಾಂತಯ್ಯ ಹಿರೇಮಠ ಎಂಬುವರು ಗ್ರಾಮದ ಪ್ರೌಢಶಾಲಾ ಕಟ್ಟಡ ನಿರ್ಮಾಣಕ್ಕೆ ಒಂದು ಎಕರೆ ಜಮೀನನ್ನು ಗ್ರಾಮದ ಹಿರಿಯರ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಬುಧವಾರ ದಾನವಾಗಿ ನೀಡುವ ಮೂಲಕ ಗ್ರಾಮದ ಮಕ್ಕಳ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟರು.

ಈ ಸಂದರ್ಭದಲ್ಲಿ ಡಿಡಿಪಿಐ ಎಂ.ಎ ರೆಡ್ಡೇರ, ಬಿಇಒ ಆರ್.ಎನ್ ಹುರಳಿ, ಅಕ್ಷರದಾಸೋಹಾಧಿಕಾರಿ ಬಿ.ವಿ ಅಂಗಡಿ, ಬಿಆರ್‌ಸಿ ಎಂ.ಎ ಫಣಿಬಂದ್, ಎಂ.ಎಸ್ ದೇಸಾಯಿ, ಬಿ.ಬಿ ಉಸಲಕೊಪ್ಪ, ವಾಯ್. ಕೆ ಕುರಿ, ಪಿ.ಎಸ್ ಐಹೊಳ್ಳಿ, ಎಂ.ವಾಯ್ ಖವಾಸ್ತ, ಎಂ.ಪಿ ಬಿಸಾಟಿ ಸೇರಿದಂತೆ ಪ್ರೌಢಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

## ಸರ್ಕಾರ ರೈತರ ನೆರವಿಗೆ ಧಾವಿಸಲಿ: ಐ.ಎಸ್ ಪಾಟೀಲ



■ ವಿಜಯಸಾಕ್ಷಿ ಸುದ್ದಿ, ರೋಣ

ರೋಣ ತಾಲೂಕು ಸೇರಿದಂತೆ ನಾಡಿನ ಹಲವಡೆ ತೀವ್ರ ಬರಗಾಲ ಆವರಿಸಿದ್ದು, ಈ ಹಿನ್ನೆಲೆಯಲ್ಲಿ ಸರಕಾರ ಸಾಲ ಮನ್ನಾ ಅಥವಾ ಸಾಲದ ಮೇಲಿನ ಬಡ್ಡಿಯನ್ನಾದರೂ ಮನ್ನಾ ಮಾಡುವ ಮೂಲಕ ರೈತರ ನೆರವಿಗೆ ಧಾವಿಸಬೇಕು ಎಂದು ಶೀಘ್ರ ಸರಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಕೆಸಿಸಿ ಬ್ಯಾಂಕ್ ನಿರ್ದೇಶಕ ಐ.ಎಸ್ ಪಾಟೀಲ ಹೇಳಿದರು.

ಅವರು ಬುಧವಾರ ಪ್ರಾ.ಸ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಸಭಾಂಗಣದಲ್ಲಿ ಜರುಗಿದ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಮಳೆಯ ಕೊರತೆ ಹಿನ್ನೆಲೆಯಲ್ಲಿ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಬಿತ್ತನೆ ಮಾಡಿಯೂ ಕೈ ಸುಟ್ಟುಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಸರಕಾರ ರೈತರ ಸಾಲದ ಮೆಲಿನ ಬಡ್ಡಿಯನ್ನಾದರೂ ಮನ್ನಾ ಮಾಡುವ ಮೂಲಕ ರೈತರ ನೆರವಿಗೆ ಧಾವಿಸಬೇಕಿದೆ ಎಂದರು.

ಸಹಕಾರಿ ಸಂಘಗಳ ಬೆಳವಣಿಗೆಯಲ್ಲಿ ರೈತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ರೈತರು ಸಹಕಾರಿ ಸಂಘಗಳಿಂದ ಪಡೆದ ಸಾಲವನ್ನು ಸಕಾಲದಲ್ಲಿ ಮರು ಪಾವತಿ ಮಾಡಿ, ಸಂಘದ ಬೆಳವಣಿಗೆಗೆ ಸಹಕರಿಸಬೇಕು. ಮುಖ್ಯವಾಗಿ ಸಹಕಾರಿ ಸಂಘಗಳು ಸಣ್ಣ ರೈತರನ್ನು ಗುರುತಿಸುವ ಜೊತೆಗೆ ಅವರಿಗೆ ಸಂಘಗಳ ಸಹಾಯ ಹಸ್ತವನ್ನು ಚಾಚಬೇಕು. ರೈತರಿಗೆ ಉಪಯುಕ್ತವಾಗಿರುವ ಯೋಜನೆಗಳನ್ನು ಮುಟ್ಟಿಸಲು ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇದರಿಂದ ಸಹಕಾರಿ ಕ್ಷೇತ್ರದ ಜೊತೆಗೆ ರೈತರ ಪ್ರಗತಿ ಕೂಡ ಆಗಲಿದೆ ಎಂದರು.

ಅಧ್ಯಕ್ಷತೆಯನ್ನು ಬಸವರಾಜ ನವಲಗುಂದ ವಹಿಸಿದ್ದರು. ದಶರಥ ಗಾಣಿಗೇರ, ಎ.ಆರ್ ಮಲ್ಲನಗೌಡ್ರ, ಆರ್.ಎ ಪಲ್ಲೇದ, ಬಿ.ಎಸ್ ಕರಿಗೌಡ್ರ, ಬಿ.ಡಿ ಬ್ಯಾಳಿ, ಬಿ.ಎಸ್ ರೆಡ್ಡೆರ, ಆಯ್.ಸಿ ರಾಠೋಡ, ರೂಪಾ ಅಂಗಡಿ, ಅನಸುಯಾ ಪರಡ್ಡಿ ಸೇರಿದಂತೆ ಸಹಕಾರಿ ಕ್ಷೇತ್ರದ ಅಧಿಕಾರಿಗಳು, ರೈತರು, ಸದಸ್ಯರು ಪಾಲ್ಗೊಂಡಿದ್ದರು.

## ಸಾರ್ವಜನಿಕರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಶಿರಹಟ್ಟಿಯ ಈಶ್ವರ ಸಮುದಾಯ ಭವನದ ಆಸ್ತಿಯ ಮಾಲಿಕತ್ವದ ನಿವೇಶನದಲ್ಲಿ ಈಶ್ವರ ಸಮುದಾಯ ಭವನ ನಿರ್ಮಾಣ ಮಾಡುವ ಕುರಿತು ಆಗಸ್ಟ್ 21 ರಂದು ಆನ್‌ಲೈನ್ ಮೂಲಕ ಕಟ್ಟಡ ಕಟ್ಟಲು ಅರ್ಜಿ ಸಲ್ಲಿಸಿದ್ದು, ಸದರಿ ಕಟ್ಟಡಕ್ಕೆ ಸಂಬಂಧಿಸಿದಂತೆ ಯಾವುದಾದರೂ ತಂಟೆ ತಕರಾರು ಇದ್ದರೆ 7 ದಿನದೊಳಗಾಗಿ ಲಿಖಿತವಾಗಿ ಅರ್ಜಿಯನ್ನು ಶಿರಹಟ್ಟಿ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಇದಕ್ಕೆ ತಪ್ಪಿದಲ್ಲಿ ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದು ತಿಳಿದು ಕಟ್ಟಡ ಪರವಾನಿಗೆ ನೀಡಲಾಗುವುದು ಎಂದು ಶಿರಹಟ್ಟಿ ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08487-295009 ಗೆ ಸಂಪರ್ಕಿಸಬಹುದಾಗಿದೆ.



ಲಕ್ಕುಂಡಿಯ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಪ್ರಗತಿಪರ ಸೇವಾ ಸಂಸ್ಥೆ ಮಂಡ್ಯ ಇವರ ಆಶ್ರಯದಲ್ಲಿ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಪ್ರಾಚಾರ್ಯ ರವಿ ಉದ್ದಣ್ಣವರ, ಚಿತ್ರಕಲಾ ಶಿಕ್ಷಕ ಆರ್.ಎಸ್ ಹಾದಿಮನಿ ಇವರ ಸಮ್ಮುಖದಲ್ಲಿ ಜಾನಪದ ಕಲೆ, ನಿಸರ್ಗ, ಕ್ರಿಯೇಟಿವ್ ಚಿತ್ರಕಲೆಯ ಪ್ರಕಾರಗಳಲ್ಲಿ 8, 9 ಮತ್ತು 10ನೇ ತರಗತಿ ಹಾಗೂ 6, 7ನೇ ತರಗತಿಯ ವಿದ್ಯಾರ್ಥಿಗಳು ಚಿತ್ರಗಳನ್ನು ರಚಿಸಿದರು.

## ಸೃಜನಾತ್ಮಕ ಕಲೆಯಿಂದ ಕಲಿಕೆ ಸಾಕಾರ



■ ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳಲ್ಲಿ ಅಡಗಿದ ಸೃಜನಾತ್ಮಕ ಕಲೆಯನ್ನು ಕಲಿಕೆಯಲ್ಲಿ ತೊಡಗಿಸುವಂತೆ ಮಾಡಿದಾಗ ಗುಣಾತ್ಮಕ ಶಿಕ್ಷಣ ಸಾಕಾರವಾಗುತ್ತದೆ. ನಲಿಯುತ್ತ ಕಲಿಯುವ ವಾತಾರಣವು ಭಯಮುಕ್ತವಾಗಿರುತ್ತದೆ ಎಂದು ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ ನಡುವಿನಮನಿ ಅಭಿಪ್ರಾಯಪಟ್ಟರು.

ಇಲ್ಲಿನ ಹುಲಕೋಟಿ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣುಮಕ್ಕಳ ಶಾಲೆಯಲ್ಲಿ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ವೈಜ್ಞಾನಿಕ ರಾಕೆಟ್ ಮೂಲಕ ಉದ್ಘಾಟಿಸಿ ಮಾತನಾಡಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಅಬ್ದುಲ್‌ಕರಿಂಸಾಬ ತಹಸೀಲ್ದಾರ, ಶಿಕ್ಷಕರ ಸಹಕಾರಿ ಸಂಘದ ಅಧ್ಯಕ್ಷ ಗಿರೀಶ ಬಂಡಿಹಾಳ, ಎ.ವಿ ಪ್ರಭು, ಪಾಲಕರ ಪ್ರತಿನಿಧಿ ಸುಜಾತಾ ಮಠಪತಿ, ಬಿಆರ್‌ಪಿಗಳಾದ ಆರ್.ಎನ್ ಅಣ್ಣಿಗೇರಿ, ಡಿ.ಸಿ ನದಾಫ್, ಸಿಆರ್‌ಪಿಗಳಾದ ಎಸ್.ಆರ್ ಮಠಪತಿ, ಬಿ.ಎಂ ಹೊಂಬಳ, ಆಯ್.ಡಿ ಗಾಡಗೋಳಿ, ಅನ್ನಪೂರ್ಣ ಯಳವಾರ, ವಾಣಿಶ್ರೀ ಆಲೂರಮುಂತಾದವರಿದ್ದರು.

ಗುರುಮಾತೆ ಎ.ವಿ ಹರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. 14 ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಅಶೋಕ ವಿ.ತಳವಾರ ಸ್ವಾಗತಿಸಿದರು. ಸಿಆರ್‌ಪಿ ಬೂದೇಶ ಕಪಲಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ರೇಣುಕಾ ಗುತ್ತಿ ನಿರೂಪಿಸಿದರೆ, ಆರ್.ವಾಯ್ ಹನುಮಾರ ವಂದಿಸಿದರು.

### 'ನನ್ನ ದೇಶ, ನನ್ನ ಮಣ್ಣು' ಅಭಿಯಾನಕ್ಕೆ ಚಾಲನೆ ನೀಡಿದ ಕಳಕಪ್ಪ ಬಂಡಿ

## ಈ ಅಭಿಯಾನ 'ಏಕ ಭಾರತ-ಶ್ರೇಷ್ಠ ಭಾರತ'ದ ಸಂಕೇತ



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ದೇಶಕ್ಕಾಗಿ ಬಲಿದಾನ ಮಾಡಿದ ಹುತಾತ್ಮರ ಸ್ಮರಣಾರ್ಥವಾಗಿ ಪ್ರಧಾನಿ ಮೋದಿ ಅವರು ಘೋಷಿಸಿರುವ 'ನನ್ನ ದೇಶ, ನನ್ನ ಮಣ್ಣು' ಅಭಿಯಾನಕ್ಕೆ ಮತಕ್ಷೇತ್ರದಲ್ಲಿ ಬುಧವಾರ ಚಾಲನೆ ನೀಡಲಾಗಿದೆ ಎಂದು ಮಾಜಿ ಸಚಿವ ಕಳಕಪ್ಪ ಬಂಡಿ ಹೇಳಿದರು.

ಸಮೀಪದ ಮ್ಯಾಕಲ್‌ಝರಿ ಗ್ರಾಮದಲ್ಲಿ ರೋಣ ಮಂಡಲ ಭಾರತೀಯ ಜನತಾ ಪಾರ್ಟಿಯಿಂದ ನಡೆದ 'ನನ್ನ ಮಣ್ಣು, ನನ್ನ ದೇಶ' ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದ ಮೂಲೆ ಮೂಲೆಗಳಿಂದ ಮೃತ್ತಿಕೆ ಸಂಗ್ರಹಿಸಿ, ದೇಹಲಿಯಲ್ಲಿರುವ ರಾಷ್ಟ್ರೀಯ ಯುದ್ಧ ಸ್ಮಾರಕದ ಸಮೀಪದಲ್ಲೇ ದೇಶಾದ್ಯಂತ ಸಂಗ್ರಹಿಸುವ ಮಣ್ಣಿನಲ್ಲಿ ಗಿಡಗಳನ್ನು ನೆಟ್ಟು ಅಮೃತ್ ಉದ್ಯಾನ ನಿರ್ಮಿಸಲಾಗುತ್ತಿದೆ. ಈ ಉದ್ಯಾನವು 'ಏಕ ಭಾರತ ಶ್ರೇಷ್ಠ ಭಾರತ'ದ ಸಂಕೇತವಾಗಿ ಹೊರಹೊಮ್ಮಲಿದೆ ಎಂದರು.

> ದೇಶದ ಸೈನಿಕರು ದೇಶಕ್ಕಾಗಿ ಮಾಡಿದ ತ್ಯಾಗವನ್ನು ಹಾಗೂ ಸ್ವಾತಂತ್ರ್ಯ ಹೋರಾಟವನ್ನು ಸ್ಮರಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಈ ಅಭಿಯಾನವು ದೇಶದ ಮೂಲೆ ಮೂಲೆಗಳಲ್ಲಿ ದೇಶಭಕ್ತಿಯನ್ನು ಪಸರಿಸಬೇಕು ಹಾಗೂ ದೇಶದ ಮಣ್ಣಿನ ಸತ್ವವನ್ನು ಪ್ರತಿ ಮನೆ ಮನೆಯ ಯುವ ಶಕ್ತಿಗೆ ತಲುಪಿಸಬೇಕು ಎಂಬುದು ಪ್ರಧಾನಿಯವರ ಕನಸಾಗಿದೆ. ಹುತಾತ್ಮ ಯೋಧರನ್ನು ಗೌರವಿಸುವ ನಿಟ್ಟಿನಲ್ಲಿ ತಾಲೂಕಿನ ನಾಗೇಂದ್ರಗಡ, ಬೊಮ್ಮಸಾಗರ, ಲಕ್ಕಲಕಟ್ಟಿ, ಜೀಗೇರಿ, ಕುಂಟೋಜಿ ಸೇರಿ ವಿವಿಧ ಗ್ರಾಮಗಳಲ್ಲಿ ಬಿಜೆಪಿ ರೋಣ ಮಂಡಳದಿಂದ ಸಾರ್ವಜನಿಕರ ಸಹಯೋಗದಲ್ಲಿ ಮಣ್ಣು ಸಂಗ್ರಹಿಸಲು ಮುಂದಾಗಿದ್ದೇವೆ.
>
> – ಉಮೇಶ ಚನ್ನುಪಾಟೀಲ.
> ಬಿಜೆಪಿ ಮುಖಂಡರು.

ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ, ಗ್ರಾ.ಪಂ ಸದಸ್ಯರಾದ ಶರಣಪ್ಪ ಬಂಡಿ, ಆನಂದ ಬಂಕದ, ಗ್ರಾ.ಪಂ ಮುಖಂಡರಾದ ಮುದಿಯಪ್ಪ ಕರಡಿ, ಡಿ.ಜಿ ಕಟ್ಟಿಮನಿ, ನೀಲಪ್ಪ ಗುರಿಕಾರ, ಅಂದಪ್ಪ ಅಂಗಡಿ, ಮುತ್ತಯ್ಯ ಕಾರಡಗಿಮಠ, ಸಂಜೀವ ಲೆಕ್ಕಿಹಾಳ, ಕಳಕಪ್ಪ ಅಗಸಿಮುಂದಿನ, ಕಳಕಪ್ಪ ಅಂಗಡಿ, ಮಹಾಂತೇಶ ಪೂಜಾರ, ಅಶೋಕ ವನ್ನಾಲ, ಭಾಸ್ಕರ ರಾಯಬಾಗಿ, ಯಮನಪ್ಪ ಕುಕ್ಕೂಬಾಯಿ, ಬುಡ್ಡಪ್ಪ ಮೂಲಿಮನಿ, ಬಾಳು ಗೌಡರ ಇತರರು ಇದ್ದರು.


**ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ, ಗದಗ**
ಪಿನ್ ಕೋಡ್ ನಂ. 582101. ದೂರವಾಣಿ: 08372-278003.
ಇ-ಮೇಲ್: uda-gadag@hotmail.com

ಸಂ: ನಅಪ್ರಾಗಬೆ/GBUDA-LBPAS-000/2023-24/CLU/600 ದಿನಾಂಕ: 19-09-2023

**ಪ್ರಕಟಣೆ**

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವದೇನೆಂದರೆ, ಅರ್ಜಿದಾರರಾದ ಶ್ರೀ ಮುನಿಷರಡ್ಡಿ ಬಸವರಡ್ಡಿ ಹುಚ್ಚಣ್ಣವರ ಈ ಕೆಳಕಂಡ ಜಮೀನನ್ನು ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಈ ಭೂ ಉಪಯೋಗ ಬದಲಾವಣೆಯಿಂದ ಸ್ಥಳದಲ್ಲಿ ವಸತಿ ನಿವೇಶನಗಳನ್ನು ಮಾಡಲು ಉದ್ದೇಶಿಸಿರುತ್ತಾರೆ. ಇದರಿಂದ ಅರ್ಜಿದಾರರಿಗೆ ಹಾಗೂ ಸಾರ್ವಜನಿಕರಿಗೆ ವಸತಿ ನಿವೇಶನಗಳು ಸಿಗುತ್ತವೆ. ಇದರಿಂದ ನಗರದಲ್ಲಿ ವಸತಿ ಸಮಸ್ಯೆ ಸ್ವಲ್ಪ ಬಗೆಹರಿಯುತ್ತದೆ ಎಂದು ತಮ್ಮ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ **14(ಎ)** ರಂತೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಯುಕ್ತರು, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ, ಪಿ.ಬಿ. ರೋಡ ಗದಗ-582101. ಇವರಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಅ.ನ. | ಗ್ರಾಮ | ರಿ.ಸ.ನಂ. | ಕ್ಷೇತ್ರ | ಮಹಾ ಯೋಜನೆ ಪ್ರಕಾರ ನಿಗಧಿಪಡಿಸಿದ ಭೂ ಉಪಯೋಗ | ಅರ್ಜಿದಾರರು ಬಯಸಿರುವ ಭೂ ಉಪಯೋಗ ಬದಲಾವಣೆ |
|---|---|---|---|---|---|
| 01 | ಬಿಂಕದಕಟ್ಟಿ | 165/*/3 | ಒಟ್ಟು ಕ್ಷೇತ್ರ 04 ಎಕರೆ 07 ಗುಂಟೆ | ಕೃಷಿ | ವಾಣಿಜ್ಯ ಉಪಯೋಗ |

ಸಹಿ/- ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಗದಗ-ಬೆಟಗೇರಿ

ವಾ.ಸಾ.ಇ./ಗದಗ/191/2023-24/ದೇಶಪಾಂಡೆಪಬ್ಲಿಸಿಟಿ


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka

### ಪಿಓಪಿ ಮೂರ್ತಿ ಮಾರಾಟ, ಪ್ರತಿಷ್ಠಾಪನೆ ಮಾಡಿದ ಗಣೇಶೋತ್ಸವ ಮಂಡಳಿಗೆ ದಂಡ

# ಕಾನೂನು ಉಲ್ಲಂಘಿಸಿದವರಿಗೆ 10 ಸಾವಿರ ರೂ. ಜುಲ್ಮಾನೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದಲ್ಲಿ ಈ ವರ್ಷದ ಗಣೇಶೋತ್ಸವಕ್ಕೆ ಹೊರಗಿನಿಂದ ಪಿಓಪಿ ಗಣೇಶ ಮೂರ್ತಿಗಳನ್ನು ತಂದು ಮಾರಾಟ ಮಾಡಲಾಗಿದೆ ಹಾಗೂ ಪಿಓಪಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ ಎನ್ನುವ ದೂರಿನ ಹಿನ್ನೆಲೆಯಲ್ಲಿ ಬುಧವಾರ ಪಟ್ಟಣದಲ್ಲಿ ಗದಗ ಜಿಲ್ಲಾ ಪರಿಸರ ಇಲಾಖೆಯ ಉಪ ಪರಿಸರ ಅಧಿಕಾರಿ ಲೋಹಿತ್ ಕುಮಾರ ಪರಿಶೀಲನೆ ನಡೆಸಿದರು.



ಮುಖ್ಯರಸ್ತೆಯಲ್ಲಿಯೇ ಪ್ರತಿಷ್ಠಾಪಿಸಲಾಗಿದ್ದ ದೊಡ್ಡ ಮೂರ್ತಿಯು ಪಿಓಪಿಯಿಂದ ಮಾಡಲಾಗಿರುವದು ದೃಢಪಟ್ಟಿದ್ದು, ಸಂಘಟಕರಿಗೆ 10 ಸಾವಿರ ರೂ.ಗಳ ದಂಡ ವಿಧಿಸುವಂತೆ ಮುಖ್ಯಾಧಿಕಾರಿಗಳಿಗೆ ಪರಿಸರ ಇಲಾಖೆ ಅಧಿಕಾರಿಗಳು ತಿಳಿಸಿದರು. ಅಲ್ಲದೆ ಮೂರ್ತಿ ಮಾರಾಟ ಮಾಡಿದ ವ್ಯಕ್ತಿಯನ್ನು ಪತ್ತೆ ಹಚ್ಚಿ, ಅವನಿಗೂ ದಂಡ ವಿಧಿಸುವಂತೆ ಅಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಪಟ್ಟಣದಲ್ಲಿ ಪಿಓಪಿ ಮೂರ್ತಿ ಪ್ರತಿಷ್ಠಾಪನೆ ಮಾಡಿದ ಗಣೇಶೋತ್ಸವ ಮಂಡಳಿಗೆ ದಂಡ ವಿಧಿಸಿದರು. ಮೂರ್ತಿ ಮಾರಾಟ ಮಾಡಿದ ವ್ಯಕ್ತಿಗೂ ದಂಡ ವಿಧಿಸುವದಾಗಿ ತಿಳಿಸಿದರು.

ಪಟ್ಟಣದಲ್ಲಿ ಈ ವರ್ಷ ಸಾಕಷ್ಟು ಪ್ರಮಾಣದಲ್ಲಿ ಪರಿಸರಕ್ಕೆ ಹಾನಿಯುಂಟುಮಾಡುವ ಪಿಓಪಿ ಗಣೇಶ ಮೂರ್ತಿಗಳನ್ನು ಮಾರಾಟ ಮಾಡಲಾಗಿದ್ದು, ಈ ಕುರಿತಂತೆ ತಾಲೂಕಾ, ಜಿಲ್ಲಾ ಮತ್ತು ಸಂಬಂಧಿಸಿದ ಇಲಾಖೆಗಳು ಕಣ್ಮುಚ್ಚಿಕೊಂಡು ಕುಳಿತಿವೆ ಎನ್ನುವ ಆರೋಪಗಳು ಕೇಳಿ ಬಂದಿದ್ದವು. ಕಳೆದ ಒಂದು ವಾರದಿಂದಲೂ ಪಿಓಪಿ ಗಣೇಶನ ಮೂರ್ತಿಗಳನ್ನು ಮಾರಾಟ ಮಾಡಲಾಗಿದ್ದರೂ ಸಹ ಯಾವುದೇ ಅಧಿಕಾರಿಗಳು ಈ ಕಡೆ ಗಮನ ಹರಿಸಿಲ್ಲ ಎನ್ನುವದು ಪರಿಸರ ಪ್ರೇಮಿಗಳ ಮತ್ತು ಮಣ್ಣಿನ ಮೂರ್ತಿಗಳನ್ನು ತಯಾರಿಸುವವರ ಆರೋಪವಾಗಿತ್ತು. ಈ ಹಿನ್ನೆಲೆಯಲ್ಲಿ ಬುಧವಾರ ಭೇಟಿ ನೀಡಿದ ಪರಿಸರ ಇಲಾಖೆ ಅಧಿಕಾರಿಗಳು ಗಣೇಶ ಮಂಟಪಗಳಿಗೆ ತೆರಳಿ ಪರಿಶೀಲನೆ ನಡೆಸಿದರು.

ಗದಗ ಜಿಲ್ಲಾ ಪರಿಸರ ಇಲಾಖೆ ಉಪ ಪರಿಸರ ಅಧಿಕಾರಿ ಲೋಹಿತ್ ಕುಮಾರ ಮಾತನಾಡಿ, ಪರಿಸರಕ್ಕೆ ಹಾನಿಯುಂಟುಮಾಡುವ ಪಿಓಪಿ ಗಣೇಶನ ಮೂರ್ತಿಗಳನ್ನು ಮಾರಾಟ ಮಾಡದಂತೆ, ತಯಾರಿಸದಂತೆ ಹಾಗೂ ಮೂರ್ತಿಗಳನ್ನು ಪ್ರತಿಷ್ಠಾಪಿಸದಂತೆ ಸರಕಾರ ಮತ್ತು ಪರಿಸರ ಇಲಾಖೆ, ಜಿಲ್ಲಾಡಳಿತದಿಂದ ಆದೇಶವಿದ್ದರೂ ಸಹ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವದು ಕಂಡು ಬಂದಿದೆ. ಮಾರಾಟ ಮಾಡಿದವರು, ಹಾಗೂ ಪ್ರತಿಷ್ಠಾಪನೆ ಮಾಡಿದ ಸಂಘಟನೆಯವರಿಗೆ ತಪ್ಪೊಪ್ಪಿಗೆ ಪತ್ರ ಬರೆದುಕೊಡುವಂತೆ ತಿಳಿಸಿದ್ದು, 10 ಸಾವಿರ ರೂ.ಗಳ ದಂಡ ವಿಧಿಸಲಾಗುವದು. ಈಗಾಗಲೇ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಗಿರುವ ಅಂತಹ ಪಿಓಪಿ ಮೂರ್ತಿಗಳನ್ನು ಗಣೇಶ ಮೂರ್ತಿ ವಿಸರ್ಜನೆ ವೇಳೆ ವಶಕ್ಕೆ ತೆಗೆದುಕೊಳ್ಳಲಾಗುವದು. ಹಳ್ಳಿಗಳಲ್ಲಿಯೂ ಸಹ ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳುವದಾಗಿ ಹೇಳಿದರು. ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಹಾಗೂ ಸಿಬ್ಬಂದಿಗಳು ಇದ್ದರು.

# ಮಕ್ಕಳಿಗೆ ಸಿಹಿ ಉಣಿಸುವುದು ಮಹಾ ಭಾಗ್ಯ: ಮಲ್ಲಿಕಾರ್ಜುನ ಶ್ರೀಗಳು

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮನೆಯಲ್ಲಿನ ಮಕ್ಕಳಿಗೆ ಸಿಹಿ ಉಣಿಸುವುದು ಸಹಜ. ಆದರೆ ಶಾಲೆಯಲ್ಲಿನ ಎಲ್ಲ ಮಕ್ಕಳಿಗೆ ಸಿಹಿಯನ್ನು ಉಣಿಸುವುದು ಅತ್ಯಂತ ಪುಣ್ಯದ ಕಾರ್ಯ ಮತ್ತು ಅದು ಮಹಾಭಾಗ್ಯವೆಂದು ನರೇಗಲ್ಲ ಹಿರೇಮಠದ ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಹೇಳಿದರು.




ಇಲ್ಲಿನ ಶ್ರೀ ರೇಣುಕಾಚಾರ್ಯ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಪಟ್ಟಣ ಪಂಚಾಯಿತಿ ನಿವೃತ್ತ ಅಧಿಕಾರಿ ಶಿವಯೋಗಿ ಜಕ್ಕಲಿ ಅವರು ನೀಡಿದ ಸಿಹಿಯನ್ನು ಮಕ್ಕಳಿಗೆ ವಿತರಿಸಿ ಅವರು ಆಶೀರ್ವಚನ ನೀಡಿದರು. ದಾನ ಮಾಡುವ ಪದ್ಧತಿ ಹಿಂದೂ ಸಂಸ್ಕೃತಿಯಲ್ಲಿ ಎಂದಿನಿಂದಲೂ ಇದೆ. ಮಠಮಾನ್ಯಗಳಿಗೆ, ವಿದ್ಯಾರ್ಥಿಗಳಿಗೆ, ಸಂಘ-ಸಂಸ್ಥೆಗಳಿಗೆ ಅದೆಷ್ಟೋ ಜನ ದಾನಿಗಳು ದಾನವನ್ನು ನೀಡುತ್ತಿದ್ದಾರೆ. ಇದರಿಂದ ಅವರಲ್ಲಿ ಪುಣ್ಯ ಪ್ರಾಪ್ತಿಯಾಗುತ್ತದೆ. ಇಂದು ಶಿವಯೋಗಿ ಜಕ್ಕಲಿಯವರು ಈ ಶಾಲೆಯ ಮಕ್ಕಳಿಗೆ ಸಿಹಿ ಉಣಬಡಿಸಿದ್ದು ನಿಜಕ್ಕೂ ಸಂತೋಷದ ಸಂಗತಿ. ಇಲ್ಲಿ ಎಲ್ಲ ಮತ-ಪಂಥಗಳ ಮಕ್ಕಳು ಕಲಿಯುತ್ತಿದ್ದಾರೆ.

ಅಂದರೆ ಅವರೆಲ್ಲರಿಗೂ ಈ ಸಿಹಿ ವಿತರಣೆ ಮಾಡಿದ್ದು ಸಾರ್ಥಕ ಎಂದು ಶ್ರೀಗಳು ಹೇಳಿದರು. ನರೇಗಲ್ಲ ಬೀಚಿ ಬಳಗದ ಅಧ್ಯಕ್ಷ ಕೆ.ಎಸ್ ಕಳಕಣ್ಣವರ ಮಾತನಾಡಿ, ಮಕ್ಕಳಿಗೆ ಏನನ್ನೇ ದಾನ ಮಾಡಿದರೂ ಅದು ಶಿವನಿಗೆ ಅರ್ಪಿತವಾಗುತ್ತದೆ. ಶಿವಯೋಗಿ ಜಕ್ಕಲಿಯವರು ಮಕ್ಕಳಿಗೆ ನೀಡಿದ ಸಿಹಿ ಅವರ ಬಾಳಲ್ಲಿ ಖಂಡಿತ ಸಿಹಿಯನ್ನು ತುಂಬುತ್ತದೆ ಎಂದರು.

ನಿವೃತ್ತ ಪ್ರಾಚಾರ್ಯ ಡಿ.ಎ ಅರವಟಗಿಮಠ, ನಿವೃತ್ತ ಶಿಕ್ಷಕ ಎಂ.ಎಸ್ ದಢೇಸೂರಮಠ, ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ, ಬೀಚಿ ಬಳಗದ ಸಂಚಾಲಕ ಈಶ್ವರ ಬೇಟಗೇರಿ, ಹನಮಂತಪ್ಪ ಬಾಗಲಿ, ಶರಣಪ್ಪ ಜುಟ್ಲ, ಆರ್.ವೈ ಜೋಡಗಂಬಳಿ, ದಾನಿ ಶಿವಯೋಗಿ ಜಕ್ಕಲಿ, ಶಾಲಾ ಮುಖ್ಯೋಪಾಧ್ಯಾಯೆ ನಿರ್ಮಲ ಹಿರೇಮಠ ಮತ್ತು ಶಾಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

### ಪತ್ರಿಕಾಗೋಷ್ಠಿಯಲ್ಲಿ ಗುರುವಂದನಾ ಸಮಿತಿಯಿಂದ ಮಾಹಿತಿ

# ಸೆ.24ರಂದು ನರೇಗಲ್ಲದಲ್ಲಿ ಗುರುವಂದನೆ: ಆನಂದ ಕೊಟಗಿ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸೆ. 24ರಂದು 1986ರಲ್ಲಿ 1ನೇ ತರಗತಿಗೆ ಪ್ರವೇಶ ಪಡೆದು, 1993ರಲ್ಲಿ 7ನೇ ತರಗತಿ ಪೂರೈಸಿರುವ ವಿದ್ಯಾರ್ಥಿಗಳಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಗುರುವಂದನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಗುರುವಂದನಾ ಸಮಿತಿಯ ಅಧ್ಯಕ್ಷ ಆನಂದ ಕೊಟಗಿ ಹೇಳಿದರು.



ಇಲ್ಲಿನ ಪತ್ರಿಕಾ ಭವನದಲ್ಲಿ ಅವರು ಗುರುವಂದನಾ ಸಮಾರಂಭ ಕುರಿತ ವಿವರಗಳನ್ನು ನೀಡಿ ಮಾತನಾಡಿದರು.

ಅಂದಿನ ದಿನಗಳ 80 ವಿದ್ಯಾರ್ಥಿ ಸ್ನೇಹಿತರು ಈಗ ನಮ್ಮ ಸಂಪರ್ಕದಲ್ಲಿದ್ದಾರೆ. ಅವರೆಲ್ಲರನ್ನೂ, ಜೊತೆಗೆ ಅವರ ಕುಟುಂಬ ವರ್ಗದವರನ್ನು ಸೇರಿಸಿಕೊಂಡು ಈ ಗುರುವಂದನಾ ಕಾರ್ಯಕ್ರಮವನ್ನು ಅತ್ಯಂತ ಸಡಗರ, ಸಂಭ್ರಮಗಳಿಂದ ಆಚರಿಸಲಾಗುತ್ತಿದೆ ಎಂದು ಆನಂದ ಹೇಳಿದರು. ಶಿಕ್ಷಕರಾದ ಎ.ಐ ರಾಹುತ, ಎಂ.ಎಸ್ ದಢೇಸೂರಮಠ, ಸಿ.ಬಿ ಹಿರೇಮಠ, ಎಸ್.ಬಿ ಬಿಂಗೇರಿ, ಎಸ್.ವಿ ಕೊತಬಾಳ, ದೈಹಿಕ ಶಿಕ್ಷಕ ಬಿ.ವಿ ಗೌಡರ, ಶಿಕ್ಷಕಿಯರಾದ ಕೆ.ಬಿ ಭೀಮನಗೌಡ್ರ, ಎಂ.ಟಿ ಬಸರಿಗಿಡದ, ಗೀತಾ ಗುಜ್ಜಲ ಅವರನ್ನು ಸಾರೋಟಿನಲ್ಲಿ ಕೂಡ್ರಿಸಿ ಪಟ್ಟಣದಲ್ಲಿ ಮೆರವಣಿಗೆ ಮಾಡಿ, ಎಂಸಿಎಸ್ ಶಾಲಾ ಮೈದಾನಕ್ಕೆ ಕರೆ ತರಲಾಗುವುದು ಎಂದು ಕೊಟಗಿ ಮಾಹಿತಿ ನೀಡಿದರು. ಗುರುವಂದನಾ ಸಮಿತಿಯ ಗೌರವಾಧ್ಯಕ್ಷ, ನಿವೃತ್ತ ಶಿಕ್ಷಕ ಎಂ.ಎಸ್ ದಢೇಸೂರಮಠ ಮಾತನಾಡಿ, ಗುರುವಂದನೆ ನಿಮಿತ್ತ ವಿದ್ಯಾರ್ಥಿಗಳು ವನ ಮಹೋತ್ಸವದ ಆಚರಣೆಯನ್ನೂ ಇಟ್ಟುಕೊಂಡಿರುವುದು ಸ್ತುತ್ಯವಾದ ಕಾರ್ಯ. ಈ ಪ್ರಭಾತಫೇರಿ ಮತ್ತು ಸಾರೋಟಿನಲ್ಲಿ ನಿವೃತ್ತ ಶಿಕ್ಷಕರೆಲ್ಲರ ಮೆರವಣಿಗೆಯ ಸುಂದರ ದೃಶ್ಯಗಳನ್ನು ಕಣ್‌ತುಂಬಿಕೊಳ್ಳುವ ಸೌಭಾಗ್ಯ ನರೇಗಲ್ಲ ಜನತೆಗೆ ಒದಗಲಿದೆ ಎಂದು ತಿಳಿಸಿದರು.

ಇದೇ ಬ್ಯಾಚಿನ ವಿದ್ಯಾರ್ಥಿ ಚಂದ್ರಶೇಖರ ಸೋಮನಗೌಡರ ಶಾಲೆಗೆ ಒಂದು ಸುಸಜ್ಜಿತ ರಂಗ ಮಂದಿರವನ್ನು ನಿರ್ಮಿಸಿ ಕೊಡುವ ಭರವಸೆಯನ್ನು ನೀಡಿರುವುದು ಈ ವಿದ್ಯಾರ್ಥಿಗಳ ಶಾಲಾ ಪ್ರೀತಿಗೆ ಸಾಕ್ಷಿಯಾಗಿದೆ ಎಂದು ದಢೇಸೂರಮಠ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಗುರುವಂದನಾ ಸಮಿತಿಯ ಖಜಾಂಚಿ ರಾಜೇಂದ್ರ ಪುರೋಹಿತ, ಸದಸ್ಯರಾದ ನರೇಶ ಜೋಳದ, ರಮೇಶ ಕಳಕಣ್ಣವರ ಮುಂತಾದವರು ಪಾಲ್ಗೊಂಡಿದ್ದರು.



ಗದಗ ನಗರದ ಶ್ರೀ ಪಂಚಾಕ್ಷರಿ ಗವಾಯಿಗಳ ಪ್ರಾಂಗಣ, ಎಪಿಎಂಸಿ.ಯಾರ್ಡ್‌ನಲ್ಲಿ ಗಜಾನನ ಉತ್ಸವ ಸಮಿತಿ ವತಿಯಿಂದ ಬುಧವಾರ ಸಂಜೆ ನೂತನ ಗಣೇಶ ಮಂಟಪದಲ್ಲಿ ವೀರೇಶ್ವರ ಪುಣ್ಯಾಶ್ರಮದ ಕಲಾವಿದರಿಂದ ಸಂಗೀತ ಕಾರ್ಯಕ್ರಮ ಶ್ರದ್ಧಾ ಭಕ್ತಿಯಿಂದ ನೆರವೇರಿತು. ವಯೋಲಿನ್ ವಾದಕರಾದ ಗಿರೀಶ್ ಬೆಂಗಳೂರು, ತಬಲಾ ವಾದಕರಾದ ಶರಣು ಗೋಗಿ, ಕೊಳಲು ವಾದಕರಾದ ರಮೇಶ ಬಿಜಾಪುರ ತಬಲಾ ಸೋಲೋ ಸರಿಗಮ ಖ್ಯಾತಿಯ ರೇವಣಸಿದ್ಧ ಪುಲಾರಿ ಇವರು ಸಂಗೀತ ಕಾರ್ಯಕ್ರಮದಲ್ಲಿ ಜುಗಲ್ ಬಂದಿ ಮೂಲಕ ಸಾರ್ವಜನಿಕರಿಗೆ ರಸದೌತಣ ನೀಡಿದರು. ಈ ಸಂದರ್ಭದಲ್ಲಿ ಗಜಾನನ ಉತ್ಸವ ಸಮಿತಿ ಅಧ್ಯಕ್ಷರು, ಸರ್ವ ಸದಸ್ಯರು ಹಾಗೂ ಸಾರ್ವಜನಿಕರು ಸಂಗೀತ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ

ಸಂ: ನ.ಅ.ಪ್ರಾ.ಗಬೆ/ನಾ.ಸೌ/ಹಂಚಿಕೆ/ 568/2023-24. ದಿನಾಂಕ: 16-09-2023.

## ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ ಬಗ್ಗೆ ಪ್ರಕಟಣೆ

ಕರ್ನಾಟಕ ಸರ್ಕಾರದ ಸಂಘ ಸಂಸ್ಥೆಗಳ ನೋಂದಣಿ 1960 ಅಥವಾ ಸಹಕಾರಿ ಸಂಸ್ಥೆಗಳ ಕಾಯ್ದೆ 1959ರ ಅಥವಾ ನೋಂದಾಯಿತ ಶೈಕ್ಷಣಿಕ, ಧಾರ್ಮಿಕ, ಛಾರಿಟೇಬಲ್ ಟ್ರಸ್ಟನವರಿಂದ ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನಗಳನ್ನು ಈ ಕೆಳಕಂಡ ಖಾಸಗಿ ವಸತಿ ಬಡಾವಣೆಯಲ್ಲಿ ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ ನಿಯಮ 1991ರ ಪ್ರಕಾರ ಹಂಚಿಕೆ ಮಾಡುವ ಸಂಬಂಧ ಅರ್ಜಿಯನ್ನು ಈ ಮೂಲಕ ಆಹ್ವಾನಿಸಲಾಗಿದೆ.

ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡ ಖಾಸಗಿ ವಸತಿ ಬಡಾವಣೆಯಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು ಈ ಪ್ರಕಟಣೆ ಹೊರಡಿಸಿದ 19-10-2023 ರ ಒಳಗೆ ಸಾರ್ವಜನಿಕ ಆಕ್ಷೇಪಣೆ ಹಾಗೂ ಸಲಹೆ ನೀಡುವಂತೆ ಕೋರಲಾಗಿದೆ. ಅವಧಿ ಮೀರಿ ಬಂದ ಆಕ್ಷೇಪಣೆ ಮತ್ತು ಸಲಹೆ ಪರಿಗಣಿಸಲಾಗುವುದಿಲ್ಲ.

| ಅ. ಸ. | ಗ್ರಾಮ | ರಿಸನಂ | ಸಿ.ಎ. ನಿವೇಶನ ಸಂಖ್ಯೆ | ಸಿ.ಎ. ನಿವೇಶನದ ವಿಸ್ತೀರ್ಣ (ಚ.ಮೀ) ಗಳಲ್ಲಿ | ಸ್ಥಳ ವಿವರ/ ನಿವೇಶನಕ್ಕೆ ಹೊಂದಿ ಇರುವ ರಸ್ತೆಯ ಅಗಲ | ಉದ್ದೇಶ | ಉಪ ನೋಂದಣಿ ಅಧಿಕಾರಿಯವರು ನಿಗಧಿ ಪಡಿಸಿದ ದರ (ಪ್ರತಿ ಚ.ಮೀ) | ಒಟ್ಟು ಗುತ್ತಿಗೆ ಮೊಬಲಗು | ಅರ್ಜಿಯ ಜೊತೆಗೆ ಸಲ್ಲಿಸಬೇಕಾದ ಮೊತ್ತ. ನೋಂದಣಿ ಫೀ | ಅರ್ಜಿಯ ಜೊತೆಗೆ ಸಲ್ಲಿಸಬೇಕಾದ ಮೊತ್ತ. ಇ.ಎಂ.ಡಿ (10%) ರೂ. | ಮೀಸಲಾತಿ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಗದಗ | 862, 863, 864 | 389 | 1325 | ಎಸ್.ಎಮ್.ಕೃಷ್ಣ ಆಶ್ರಯ ಕಾಲೋನಿ ಹತ್ತಿರ | ಆಸ್ಪತ್ರೆ | 3800 | 50,35,000 | 2000 | 5,03,500 | ಸಾಮಾನ್ಯ |
| 2 | ಗದಗ | 862, 863, 864 | 390 | 4679 | ಎಸ್.ಎಮ್.ಕೃಷ್ಣ ಆಶ್ರಯ ಕಾಲೋನಿ ಹತ್ತಿರ | ಶೈಕ್ಷಣಿಕ | 3800 | 1,77,80,200 | 7000 | 17,78,020 | ಪರಿಶಿಷ್ಟ ಜಾತಿ |
| 3 | ಗದಗ | 862, 863, 864 | 391 | 2216 | ಎಸ್.ಎಮ್.ಕೃಷ್ಣ ಆಶ್ರಯ ಕಾಲೋನಿ ಹತ್ತಿರ | ಸಮುಧಾಯ ಭವನ | 3800 | 84,20,800 | 5000 | 8,42,080 | ಸಾಮಾನ್ಯ |
| 4 | ಗದಗ | 862, 863, 864 | 607 | 5370 | ಎಸ್.ಎಮ್.ಕೃಷ್ಣ ಆಶ್ರಯ ಕಾಲೋನಿ ಹತ್ತಿರ | ಬಸ್ಸ್ ನಿಲ್ದಾಣ | 3800 | 2,04,06,000 | 7000 | 20,40,600 | ಸಾಮಾನ್ಯ |
| 5 | ಗದಗ | 134/ಫ (1+2ಇ) | 42 | 627 | ಕಳಸಾಪೂರ ರೋಡ | ಶೈಕ್ಷಣಿಕ | 4400 | 27,58,800 | 1000 | 2,75,880 | ಪರಿಶಿಷ್ಟ ಜಾತಿ |
| 6 | ಗದಗ | 406/2 | 21 | 591 | ಹೀರೆಹಂದಿಗೋಳ ರಸ್ತೆ | ವಸತಿ ನಿಲಯ | 4200 | 24,82,200 | 1000 | 2,48,220 | ಸಾಮಾನ್ಯ |
| 7 | ಗದಗ | 596/ಕ (2ಅ) | 02 | 589 | ಹೀರೆಹಂದಿಗೋಳ ರಸ್ತೆ | ವ್ಯಾಯಮ ಶಾಲೆ | 3600 | 21,20,400 | 1000 | 2,12,040 | ಪರಿಶಿಷ್ಟ ಜಾತಿ |
| 8 | ಗದಗ | 597/ಡ (2ಬ/1) | 32 | 625 | ಹೀರೆಹಂದಿಗೋಳ ರಸ್ತೆ | ವಸತಿ ನಿಲಯ | 3600 | 22,50,000 | 1000 | 2,25,000 | ಪರಿಶಿಷ್ಟ ಜಾತಿ |
| 9 | ಗದಗ | 639 | 297 | 1224 | ಹೊಂಬಳ ರೋಡ | ಆಧುನಿಕ ಚಿತಗಾರ | 2200 | 26,92,800 | 2000 | 2,69,280 | ಸಾಮಾನ್ಯ |
| 10 | ಗದಗ | 639 | 298 | 1448 | ಹೊಂಬಳ ರೋಡ | ಶೈಕ್ಷಣಿಕ | 2200 | 31,85,600 | 2000 | 3,18,560 | ಪರಿಶಿಷ್ಟ ಜಾತಿ |
| 11 | ಗದಗ | 639 | 301 | 1391 | ಹೊಂಬಳ ರೋಡ | ಪಶುವೈದ್ಯ ಆಸ್ಪತ್ರೆ | 2200 | 30,60,200 | 2000 | 3,06,020 | ಸಾಮಾನ್ಯ |
| 12 | ಗದಗ | 279/1+2+3 /ಡ,ಗ/2ಅ,ಗ/2ಬ | 81 | 1258 | ರಾಧಕೃಷ್ಣ ನಗರದ ಹಿಂದುಗಡೆ | ಸಂಘದ ಕಚೇರಿ | 3500 | 44,03,000 | 2000 | 4,40,300 | ಸಾಮಾನ್ಯ |
| 13 | ಗದಗ | 70/1 | 98 | 946 | ಸಂಭಾಪೂರ ರಸ್ತೆ | ಶೈಕ್ಷಣಿಕ | 6400 | 60,54,400 | 1000 | 6,05,440 | ಪರಿಶಿಷ್ಟ ಜಾತಿ |
| 14 | ಗದಗ | 120/ಬ(6) | 01 | 620 | ಮುಂಡರಗಿ ರೋಡ | ಬ್ಯಾಂಕ್ | 4600 | 28,52,000 | 1000 | 2,85,200 | ಸಾಮಾನ್ಯ |
| 15 | ಗದಗ | 235/7 | 84 | 784 | ಮುಳಗುಂದ ರೋಡ ಒಳಗಡೆ | ಶೈಕ್ಷಣಿಕ | 2500 | 19,60,000 | 1000 | 1,96,000 | ಸಾಮಾನ್ಯ |
| 16 | ಗದಗ | 644/2ಬ/2 | 63 | 858 | ಬಳಗಾನೂರ ರೋಡ | ಶೈಕ್ಷಣಿಕ | 4600 | 39,46,800 | 1000 | 3,94,680 | ಪರಿಶಿಷ್ಟ ಜಾತಿ |
| 17 | ಗದಗ | 131/ಬ(2) | 34 | 448 | ಮುಂಡರಗಿ ರೋಡ | ಸಮುದಾಯ ಭವನ/ಸಂಘದ ಕಚೇರಿ | 4600 | 20,60,800 | 1000 | 2,06,080 | ಸಾಮಾನ್ಯ |
| 18 | ಗದಗ | 393/ಡ (1+2/ಅ) | 46 | 1324 | ಗಂಗಿಮಡಿ ಹತ್ತಿರ | ಕಾರ್ಯ ನಿರತ ಮಹಿಳಾ ವಸತಿ ನಿಲಯ, | 4200 | 55,60,800 | 2000 | 5,56,080 | ಸಾಮಾನ್ಯ |
| 19 | ಗದಗ | 66/3 | 32 | 450 | ಸಂಭಾಪೂರ ರಸ್ತೆ | ಸಮುದಾಯ ಭವನ | 4600 | 20,70,000 | 1000 | 2,07,000 | ಸಾಮಾನ್ಯ |
| 20 | ಗದಗ | 145 | 175 | 2289 | ಕಳಸಾಪೂರ ರೋಡ್ | ಸಮುದಾಯ ಭವನ | 4400 | 1,00,71,600 | 5000 | 10,07,160 | ಸಾಮಾನ್ಯ |
| 21 | ಗದಗ | 153ಕ | 53 | 432 | ವಿಶ್ವೇಶ್ವರ ನಗರ, ರಿಂಗ್ ರೋಡ್ | ಸಮುದಾಯ ಭವನ/ಬ್ಯಾಂಕ್ | 4200 | 18,14,400 | 1000 | 1,81,440 | ಸಾಮಾನ್ಯ |
| 22 | ಗದಗ | 153ಅ | 01 | 1277.5 | ವಿಶ್ವೇಶ್ವರ ನಗರ, ರಿಂಗ್ ರೋಡ್ | ಶೈಕ್ಷಣಿಕ | 4200 | 53,65,500 | 2000 | 5,36,550 | ಸಾಮಾನ್ಯ |
| 23 | ಗದಗ | 590/1ಅ | 02 | 1268.5 | ಹೊಂಬಳ ರೋಡ, ರೈಲು ಮೇಲು ಸೇತುವೆ ಹತ್ತಿರ, ಗದಗ | ಶಿಕ್ಷಣ/ವಸತಿ ನಿಲಯ/ಸಂಘದ ಕಛೇರಿ | 3600 | 45,66,600 | 2000 | 4,56,700 | ಸಾಮಾನ್ಯ |
| 24 | ಗದಗ | 135/2ಅ+3 | 01 | 203.5 | ಕಳಸಾಪೂರ ರೋಡ | ಶೈಕ್ಷಣಿಕ/ವಸತಿ ನಿಲಯ | 4400 | 8,95,400 | 1000 | 89,550 | ಸಾಮಾನ್ಯ |
| 25 | ಗದಗ | 131/8,9,10 | 51 | 238 | ಕಳಸಾಪೂರ ರೋಡ | ಸಂಘದ ಕಚೇರಿ/ ಸಮುದಾಯ ಭವನ | 4600 | 10,94,800 | 1000 | 1,09,500 | ಸಾಮಾನ್ಯ |
| 26 | ಬೆಟಗೇರಿ | 301/ಬ(1) | 42 | 509 | ಕಣಗಿನಹಾಳ ರೋಡ | ಶೈಕ್ಷಣಿಕ | 3500 | 17,81,500 | 1000 | 1,78,150 | ಸಾಮಾನ್ಯ |
| 27 | ಬೆಟಗೇರಿ | 358ಬಿ | 01 | 364 | ಹಾತಲಗೇರಿ ರಸ್ತೆ | ಶೈಕ್ಷಣಿಕ | 2400 | 8,73,600 | 1000 | 87,360 | ಪರಿಶಿಷ್ಟ ಜಾತಿ |
| 28 | ಬೆಟಗೇರಿ | 289/ಬ(2) | 164 | 1662 | ಅಬ್ದುಲ್ ಕಲಾಂ ಹಾಲ್ ಹತ್ತಿರ | ಶೈಕ್ಷಣಿಕ | 2400 | 27,88.800 | 2000 | 2,78,880 | ಸಾಮಾನ್ಯ |
| 29 | ಬೆಟಗೇರಿ | 243/ಬ(1) | 87 | 1140 | ಹಾತಲಗೇರಿ ರಸ್ತೆ | ಸಮುದಾಯ ಭವನ | 3400 | 38,76,000 | 2000 | 3,87,600 | ಸಾಮಾನ್ಯ |
| 30 | ಬೆಟಗೇರಿ | 118/4+5 | 29 | 450 | ಹುಯಿಲಗೋಳ ರಸ್ತೆ | ಅಂಗನವಾಡಿ | 2200 | 9,90,000 | 1000 | 99,000 | ಸಾಮಾನ್ಯ |
| 31 | ಬೆಟಗೇರಿ | 357/ಕ(2) | 72 | 654.5 | ಹಾತಲಗೇರಿ ರಸ್ತೆ | ಪತ್ರಿಕೆ ವಿತರಕರ ಸಂಘ | 2400 | 15,70,800 | 1000 | 1,57,080 | ಸಾಮಾನ್ಯ |
| 32 | ಬೆಟಗೇರಿ | 289/ಅ(1) | 116 | 1651 | ಅಬ್ದುಲ್ ಕಲಾಂ ಹಾಲ್ ಹತ್ತಿರ | ಶೈಕ್ಷಣಿಕ | 2400 | 39,62,400 | 2000 | 3,96,250 | ಸಾಮಾನ್ಯ |
| 33 | ಬೆಟಗೇರಿ | 348/ಬ, (2,3) | 96 | 2200 | ಹಾತಲಗೇರಿ ರಸ್ತೆ | ಗ್ರಂಥಾಲಯ | 2400 | 52,80,000 | 5000 | 5,28,000 | ಸಾಮಾನ್ಯ |
| 34 | ಬೆಟಗೇರಿ | 40/4, 31/6 | 02 | 1148 | ಬಳಗಾನೂರ ರೋಡ | ವೃದ್ಧಾಶ್ರಮ | 2500 | 28,70,000 | 2000 | 2,87,000 | ಸಾಮಾನ್ಯ |
| 35 | ಬೆಟಗೇರಿ | 235/ಬ (2+3+5+6 ಬಿ,6ಸಿ,6ಡಿ) | 66 | 985 | ಬೆಟಗೇರಿ ರೈಲ್ವೇ ಟ್ರ್ಯಾಕ್ ಹತ್ತಿರ | ಶೈಕ್ಷಣಿಕ | 2800 | 27,58,000 | 1000 | 2,75,800 | ಸಾಮಾನ್ಯ |
| 36 | ಬೆಟಗೇರಿ | 388/ಬ(3) | 09 | 810 | ಸಂಭಾಪೂರ ರಸ್ತೆ | ವ್ಯಾಯಾಮ ಶಾಲೆ/ಗರಡಿಮನಿ | 2500 | 20,25,000 | 1000 | 2,02,500 | ಪರಿಶಿಷ್ಟ ಪಂಗಡ |
| 37 | ಬೆಟಗೇರಿ | 10/ಅ/1/2 | 13 | 344.5 | ಕುಷ್ಟಗಿ ಚಾಳ | ಸಮುದಾಯ ಭವನ | 4600 | 15,84,700 | 1000 | 1,58,470 | ಸಾಮಾನ್ಯ |
| 38 | ಬೆಟಗೇರಿ | 250/ಇ | 13 | 210 | ವಿವೇಕಾನಂದ ನಗರ | ಶೈಕ್ಷಣಿಕ | 2200 | 4,62,000 | 1000 | 46,200 | ಸಾಮಾನ್ಯ |
| 39 | ಹಾತಲಗೇರಿ | 205/3/4/5/ 6/7 | 99 | 1213 | ಹಾತಲಗೇರಿ ರೋಡ | ಸೈನಿಕ ತರಬೇತಿ ಕೇಂದ್ರ | 1320 | 16,01,160 | 2000 | 1,60,120 | ಸಾಮಾನ್ಯ |
| 40 | ಹಾತಲಗೇರಿ | 54/1+2+3+ 4ಅ+ಬ/9+10 | 01 | 280 | ಹಾತಲಗೇರಿ | ಶೈಕ್ಷಣಿಕ | 1320 | 3,69,600 | 1000 | 37,000 | ಸಾಮಾನ್ಯ |
| 41 | ಹಾತಲಗೇರಿ | 3ಅ/9 | 12 | 364 | ಹಾತಲಗೇರಿ | ಸಮುದಾಯ ಭವನ/ಗ್ರಂಥಾಲಯ | 1320 | 4,80,691 | 1000 | 48,070 | ಪರಿಶಿಷ್ಟ ಪಂಗಡ |
| 42 | ನರಸಾಪೂರ | 61/3 | 02 | 814 | ಕಣಗಿನಾಳ ರಸ್ತೆ | ಶೈಕ್ಷಣಿಕ | 1300 | 10,58,200 | 1000 | 1,05,820 | ಸಾಮಾನ್ಯ |
| 43 | ಕಳಸಾಪೂರ | 218/ಕ(3ಬ) | 29 | 487 | ಮುಳಗುಂದ ರಸ್ತೆ | ಅಂಗನವಾಡಿ | 1400 | 6,81,800 | 1000 | 68,180 | ಸಾಮಾನ್ಯ |
| 44 | ಕಳಸಾಪೂರ | 255/ಬ(1ಕ, 2,3) | 01 | 3578 | ಕಳಸಾಪೂರ ರೋಡ | ಶೈಕ್ಷಣಿಕ | 1400 | 50,09,200 | 5000 | 5,00,920 | ಸಾಮಾನ್ಯ |
| 45 | ಕಳಸಾಪೂರ | 172/1+2ಅ | 148 | 2236 | ಮುಂಡರಗಿ ರಸ್ತೆ ಬಲಗಡೆ | ಗ್ರಂಥಾಲಯ | 1400 | 31,30,400 | 5000 | 3,13,040 | ಸಾಮಾನ್ಯ |
| 46 | ಕಳಸಾಪೂರ | 239/3ಅ 240/3ಅ | 64 | 1248 | ಕಳಸಾಪೂರ ರೋಡ ರಿಂಗ್ ರೋಡ ಹತ್ತಿರ, ಬೈಪಾಸ್ | ಧಾರ್ಮಿಕ | 1400 | 17,47,200 | 2000 | 1,74,720 | ಧಾರ್ಮಿಕ ಸಂಸ್ಥೆ/ಸಭಾ ಭವನ |

**ನಾಗರಿಕ ಸೌಲಭ್ಯದ ನಿವೇಶನಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ (ನಾಗರಿಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳು 1991 ರನ್ವಯ ಹಂಚಲಾಗುವದು.**

1. ಅರ್ಜಿಗಳನ್ನು ರೂ. 300-00 ಫೀ ತುಂಬಿ ಪ್ರಾಧಿಕಾರದ ಕಛೇರಿಯಲ್ಲಿ ಪಡೆಯಬಹುದು.
2. ಮಂಜೂರಾದ ನಾಗರಿಕ ಸೌಲಭ್ಯದ ನಿವೇಶನ ನಾಲ್ಕು ವರ್ಷದೊಳಗೆ ಕಟ್ಟಡ ನಿರ್ಮಿಸಿ ಅಭಿವೃದ್ಧಿ ಪಡಿಸದಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಉದ್ದೇಶಿತ ಮಂಜೂರಾತಿಯನ್ನು ರದ್ದುಗೊಳಿಸಿ ಬೇರೆ ಸಂಸ್ಥೆಗೆ ಮಂಜೂರು ಮಾಡಲಾಗುವುದು..
3. ಹಂಚಿಕೆಯನ್ನು ಪಡೆದ ಸಂಸ್ಥೆಯವರು ನೋಟಿಸು ಸ್ವೀಕರಿಸಿದ 90 ದಿನಗೊಳಗಾಗಿ ಪ್ರಾರಂಭಿಕ ಠೇವಣಿಯನ್ನು ಮುರಿದುಕೊಂಡು ಒಂದೇ ಕಂತಿನಲ್ಲಿ ಉಳಿದ ಮೊತ್ತವನ್ನು ತುಂಬ ತಕ್ಕದ್ದು..
4. ಭರ್ತಿ ಮಾಡಿದ ಅರ್ಜಿಗಳನ್ನು ನೋಂದಣಿ ಹಣ ಹಾಗೂ ಇ.ಎಮ್.ಡಿ. ಹಣ ತುಂಬಿದ ಡಿ.ಡಿ. ಹಾಗೂ ಸಂಬಂಧಿಸಿದ ದಾಖಲೆಗಳೊಂದಿಗೆ ದಿನಾಂಕ: 19-10- 2023ರಂದು ಅಪರಾಹ್ನ 4-00 ಗಂಟೆಯ ಒಳಗೆ ಪ್ರಾಧಿಕಾರದ ಕಾರ್ಯಾಲಯದಲ್ಲಿ ಸಲ್ಲಿಸಬೇಕು.
5. ಡಿ.ಡಿ. ಯನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಗದಗ-ಬೆಟಗೇರಿ ಇವರ ಹೆಸರಿಗೆ ಪಡೆಯಬೇಕು. ಡಿ.ಡಿ. ಇಲ್ಲದ ಅರ್ಜಿಗಳನ್ನು ಸ್ವೀಕರಿಸುವದಿಲ್ಲ.
6. ನಾಗರಿಕ ಸೌಲಭ್ಯಗಳೆಂದರೆ ಕೇಂದ್ರ ಸರಕಾರದ ಕಛೇರಿಗಳು, ರಾಜ್ಯ ಸರ್ಕಾರದ ಕಛೇರಿಗಳು, ಬ್ಯಾಂಕ್, ನ್ಯಾಯ ಬೆಲೆ ಅಂಗಡಿ, ಹಾಲಿನ ಕೇಂದ್ರ, ಶಿಕ್ಷಣ ಸಂಸ್ಥೆಗಳು, ಸಂಘ ಸಂಸ್ಥೆಗಳು, ಆಟದ ಮೈದಾನ, ಸರಕಾರಿ ಆಸ್ಪತ್ರೆ, ಗ್ರಂಥಾಲಯ, ವ್ಯಾಯಾಮ ಶಾಲೆ, ಬಸ್ ನಿಲ್ದಾಣ, ಕಾರ್ಯ ನಿರತ ಮಹಿಳಾ ವಸತಿ ನಿಲಯ, ಅಂಗನವಾಡಿ, ಧಾರ್ಮಿಕ ಸಂಸ್ಥೆಗಳು, ಸಮುದಾಯ ಭವನ, ಆಧುನಿಕ ಚಿತಾಗಾರ, ಲಿಕ್ವಿಡ್ ಪೆಟ್ರೋಲಿಯಂ ಗ್ಯಾಸ್ ಗೋಡಾನ, ಪೆಟ್ರೋಲ್ ಬಂಕ್, ಮೋಟಾರ ರಿಪೇರಿ/ಸರ್ವಿಸ್‌ಗ್ಯಾರೇಜ್, ಇತ್ಯಾದಿ. **ನಿಗದಿ ಪಡಿಸಿದ ಉದ್ದೇಶಕ್ಕೆ ಅರ್ಜಿ ಸಲ್ಲಿಸದೇ ಇದ್ದಲ್ಲಿ, ಬೇರೆ ಉದ್ದೇಶಕ್ಕೆ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವದು.**
7. ನಾಗರಿಕ ಸೌಲಭ್ಯದ ನಿವೇಶನಗಳನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಮೇಲೆ ವಿತರಿಸಲಾಗುವದು ಮತ್ತು ಮಾರಾಟ/ಖರೀದಿಗೆ ಕೊಡಲಾಗುವದಿಲ್ಲ. ಲೀಜ್ ಪಡೆದವರು ಬೇರೆಯವರಿಗೆ ಸಬ್ ಲೀಜ್ ಕೊಡುವಂತಿಲ್ಲ.
8. ಅಳತೆಗೆ ತಕ್ಕಂತೆ ನಿವೇಶನದ ಮೊತ್ತ ಹೆಚ್ಚು ಕಡಿಮೆ ಆಗುವ ಸಂಭವ ಇರುತ್ತದೆ.
9. ಹಂಚಿಕೆ ಪತ್ರ ನೀಡಿದ 90 ದಿನಗಳ ಒಳಗೆ ಬಾಕಿ ಮೊತ್ತವನ್ನು ಸಂದಾಯಿಸಿ, ಲೀಜ್‌ಕರಾರು ಪತ್ರವನ್ನುತಮ್ಮ ಸ್ವಂತ ಖರ್ಚಿನಲ್ಲಿ ನೋಂದಣಿ ಮಾಡಿಸಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ ಹಂಚಿಕೆ ಪತ್ರ ತನ್ನಿಂದ ತಾನೇ ರದ್ದಾಗುತ್ತದೆ.
10. ಪರಿಶಿಷ್ಟ ಜಾತಿ ಸಂಸ್ಥೆಯವರಿಗೆ 18% ಮತ್ತು ಪರಿಶಿಷ್ಟ ಪಂಗಡ ಸಂಸ್ಥೆಯವರಿಗೆ 3% ರಷ್ಟು ನಾಗರೀಕ ಸೌಲಭ್ಯ ನಿವೇಶನಗಳನ್ನು ಕಾಯ್ದಿರಿಸಲಾಗಿದೆ.
11. ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಪ್ರಾಧಿಕಾರ ಕಾಯ್ದಿರಿಸಿಕೊಂಡಿದೆ.
12. ಅರ್ಜಿ ಜೊತೆ ಈ ಕೆಳಗಿನ ದಾಖಲೆ ವಿವರಗಳನ್ನು ಲಗತ್ತಿಸಬೇಕು.
    ಎ) ಸಂಸ್ಥೆಯ ಮೂಲ ಉದ್ದೇಶಗಳನ್ನು ಮತ್ತು ಕಾರ್ಯ ಚಟುವಟಿಕೆಗಳು ಮತ್ತು ಅದು ಸ್ಥಾಪನೆ ಆದಾಗಿನಿಂದ ಮಾಡಿದ ಸಾರ್ವಜನಿಕ ಸೇವೆಯ ವಿವರ.
    ಬಿ) ಸಂಸ್ಥೆಯ ಎರಡು ವರ್ಷಗಳ ಆರ್ಥಿಕ ಸ್ಥಿತಿ
    ಸಿ) ಸಂಸ್ಥೆಯು ಈಗ ಇರುವ ಸ್ಥಳ ವಿವರ
    ಡಿ) ನಾಗರಿಕ ಸೌಲಭ್ಯ ನಿವೇಶನಗಳನ್ನು ಹಂಚುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಒದಗುವ ಸೌಲಭ್ಯಗಳ ವಿವರ.
    ಇ) ಎರಡು ವರ್ಷಗಳ ವಾರ್ಷಿಕ ವರದಿಗಳು ಮತ್ತು ಲೆಕ್ಕ ಪರಿಶೋಧನಾ ವರದಿಗಳು.
13. ನಾಗರಿಕ ಸೌಲಭ್ಯ ಮಂಜೂರಿ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
14. ನಿಗದಿಪಡಿಸಿದ ಉದ್ದೇಶಕ್ಕೆ ಅರ್ಜಿಗಳು ಬರದಿದ್ದಲ್ಲಿ ಬೇರೆ ಉದ್ದೇಶಕ್ಕಾಗಿ ಮಂಜೂರಿ ಮಾಡುವ ಅಧಿಕಾರವನ್ನು ಪ್ರಾಧಿಕಾರ ಕಾಯ್ದು ಕೊಂಡಿರುತ್ತದೆ

ಸಹಿ/- (ರಮೇಶ ವಿ.)
**ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಗದಗ-ಬೆಟಗೇರಿ.**